ಪಂಚಮ

ಸಂಪುಟ : 7 ಆಗಸ್ಟ್ 5-1983 ಬೆಲೆ : 50 ಪೈಸೆ ಪುಟ: 2 ಸಂಚಿಕೆ : 16

ಪಂಚಾಯತ್ ರಾಜ್ ಮಸೂದೆ

ದಲಿತರ ಆತಂಕ

ಕರ್ನಾಟಕ ರಾಜ್ಯ ಸರ್ಕಾರವು ಜಾರಿಗೊಳಿಸಲು ಉದ್ದೇಶಿಸಿರುವ" ಕರ್ನಾಟಕ ಪಂಚಾಯಿತಿ ರಾಜ್ಯ ಸಂಸ್ಥೆಗಳ ಮಸೂದೆ–83ನ್ನು ದಿನಾಂಕ-24-7-83 ರಂದು ಶ್ರೀರಂಗಪಟ್ಟಣದಲ್ಲಿ ನಡೆದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಚಿಂತಕರ ಸಭೆಯು ಪರಿಶೀಲಿಸಿತು.

ಭಾರತದ ಗ್ರಾಮದ ಇಂದಿನ ಸ್ಥಿತಿಯು, ತಲೆ ಎತ್ತುವ ದಲಿತನ ತಲೆಯನ್ನೇ ಬಲಿ ತೆಗೆದುಕೊಳ್ಳುವಷ್ಟು ಕ್ರೂರವಾಗಿರುವುದರಿಂದ ಈಗಾಗಲೇ ಬಲಾಢ್ಯ ಜಾತಿಗಳ ಕೈಯಲ್ಲಿರುವ ಗ್ರಾಮಕ್ಕೆ ಹೆಚ್ಚಿನ ಅಧಿಕಾರ ಬಂದರೆ ದಲಿತರನ್ನು ಹಿಂದುಳಿದವರನ್ನು ಮತ್ತು ಅಲ್ಪಸಂಖ್ಯಾತರನ್ನು ಸಾವಿನ ದವಡೆಗೆ ನೂಕಿದಂತಾಗುತ್ತದೆ ಎಂಬ ಅಳುಕನ್ನು ದಲಿತ ಚಿಂತಕರ ಸಭೆ ವ್ಯಕ್ತಪಡಿಸಿತು.

ವಿಕೇಂದ್ರೀಕರಣವನ್ನು ಚಿಂತಕರಸಭೆ ಒಪ್ಪಿದರೂ ಕೂಡ ಕ್ರೂರ ಮೇಲ್ಜಾತಿ ವ್ಯವಸ್ಥೆಯ ಭೀತಿಯಿಂದಾಗಿ ಮಸೂದೆಯಲ್ಲಿ ತಿಳಿಸಲಾಗಿರುವ ದಲಿತರ ಕಲ್ಯಾಣವು ಕನಸೆಂಬ ಅಭಿಪ್ರಾಯಕ್ಕೆ ಬರಲಾಯಿತು. ಆದಕ್ಕಾಗಿ ಮಸೂದೆಯಲ್ಲೇ ದಲಿತರು, ಹಿಂದುಳಿದವರ, ಅಲ್ಪಸಂಖ್ಯಾತರ ರಕ್ಷಣೆ ಮತ್ತು ಕಲ್ಯಾಣವು ಅನಿವಾರ್ಯವಾಗುವಂಥ, ನಿರ್ದೇಶನ ನೀಡದಿದ್ದಲ್ಲಿ ಮಸೂದೆಯನ್ನೇ ವಿರೋಧಿಸುವುದು ದಲಿತರ ಅಲ್ಪಸಂಖ್ಯಾತರ ಉಳಿವಿನ ದೃಷ್ಟಿಯಿಂದ ಅನಿವಾರ್ಯವಾಗುತ್ತದೆಎಂಬ ನಿಲುವಿಗೆ ಸಭೆಬಂದಿತು.

ಮಸೂದೆಯ 39ನೇಸೆಕ್ಷನ್‌ಸಲ್ಲಿ ಪರಿಶಿಷ್ಟವರ್ಗ ಹಿಂದುಳಿದ ಜನಾಂಗ ಮತ್ತು ಮಹಿಳೆಯರಿಗೆ ಕಾದಿಸಿರುವ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಸಿಗದಿದ್ದ ಇತರರು ಆ ಸ್ಥಾನಕ್ಕೆ ಉಮೇದುವಾರರಾಗಿ ಸ್ಪರ್ಧಿಸಲು ಅವಕಾಶವಿರತಕ್ಕದ್ದು" ಎಂಬ ಗೇಲಿ ಅಥವಾ ಚೇಷ್ಟೆ ಅಥವಾ ಜಾತೀಯ ಅವಮಾನದ ಮಾತನ್ನು ತಕ್ಷಣವೇ ಮಸೂದೆಯಿಂದ ಹಿಂತೆಗೆದುಕೊಳ್ಳಬೇಕೆಂದು ಸಭೆ ಒತ್ತಾಯ ಪಡಿಸಿತು. ಇಂದಿನ ಗ್ರಾಮಾಂತರ ಬಲಾಢ್ಯ ಜಾತಿಯ ಸಮಾಜವು ದಲಿತರನ್ನು ಹಿಂದುಳಿದವರನ್ನು ಸ್ಪರ್ದೆಗೆ ನಿಂತರೆ ಸಾಯಿಸಿ ದಕ್ಕಿಸಿ ಕೊಳ್ಳುವಷ್ಟುವಷ್ಟು ಸಮರ್ಥರಿರುವ ಈ ಸಂದರ್ಭದಲ್ಲಿ, ಬೇಕಾದರೆ ದಲಿತ, ಹಿಂದುಳಿದವರಿಂದಲೇ 'ತಾವು ಅನರ್ಹರು' ಎಂದು ಹೇಳಿಸ

(ಕೊನೆಯ ಪುಟಕ್ಕೆ)

ಭಾ.ಜ.ಪ: ಜಾತಿವಾದಿಗಳ ಗುಲಾಮ ಸಂಘಟನೆ

ಸುಬ್ಬಯ್ಯ-ಪಂಚಮ ಮಾತುಕತೆ

ನಮ್ಮ ಜೀವನೂರು ಮಹಾದೇವನ ಪ್ರಕಾರ ಮೈಸೂರು ಪುಟ್ಟೇಗೌಡರು ಬಹಳ ಒಳ್ಳೆಯವರು; ಅಂದರೆ ಸಾಂಪ್ರದಾಯಿಕ ಅರ್ಥದಲ್ಲಿ "ಸಜ್ಜನರು". ಆದರೆ ಅವರಂತಹವರು ಭಾ. ಜ. ಪ. ದಂತಹ ಶಿಸ್ತಿಗಾರ ನರಭಕ್ಷಕ ಪಕ್ಷ ಸೇರಬಾರದಿತ್ತೆಂಬ ಅಳಲು ಅವನಿಗೆ. ಭಾ. ಜ. ಪ. ಕ್ಕೆ ಕರ್ನಾಟಕದಲ್ಲಿ ರಾಜಕೀಯ ಪಕ್ಷದ ಮೈ ಬೆಳಸಿಕೊಟ್ಟ ಎ. ಕೆ. ಸುಬ್ಬಯ್ಯನವರನ್ನು ಪಕ್ಷ ಹೊರಹಾಕಿದ ನಂತರ ಪುಟ್ಟೆಗೌಡರೂ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಒಂದು ಥರಹದ ನೆಮ್ಮದಿಯ ಸುದ್ದಿಯಾಗಿತ್ತು. ಅವರನ್ನು ಭೇಟಿ ಮಾಡಲು ಅವರ ಮನೆಗೆ ಹೋದ ನಮ್ಮೆಲ್ಲರಿಗೆ ಳಿಯುವ ಹಂಬಲದ ಯಾವುದೇ ಪಕ್ಷಕ್ಕೆ ವರದಾನಂತಿದ್ದ ಸುಬ್ಬಯ್ಯನವರ ನಾಯಕತ್ವದಲ್ಲಿ ಭಾ. ಜ. ಪ. ರಕ್ತ ಮಾಂಸ ತುಂಬಿಕೊಂಡು ಕರ್ನಾಟಕದ ಜನಾರಣ್ಯದಲ್ಲಿ ಅಲೆಯುವ ಕ್ರೂರಮೃಗವಾಗುವ ಭಯಂಕರ ದುಃಸ್ವಪ್ನ ಎಲ್ಲ ಪ್ರಗತಿಪರ ...ಡಿಗರನ್ನೂ ಆತಂಕದ ಅಂಚಿನಲ್ಲಿ ನಿಲ್ಲಿಸಿದ್ದಾಗಲೇ ಸುಬ್ಬಯ್ಯನವರನ್ನು ಭಾ. ಜ. ಪ. ...



ಹಾಕಿತ್ತು. ಭಾ. ಜ. ಪ. ಇಂಡಿಯಾದಲ್ಲಿ ಸಾವಿರಾರು ವರ್ಷ ನಡೆದುಕೊಂಡು ಬಂದಿರುವ ಎಲ್ಲ ಥರದ ಕ್ರೂರ ಅಸಮಾನತೆಗಳ ಸನಾತನ ತೌರುಮನೆ ಎಂಬುದು ಎಲ್ಲರಿಗೂ ನೆಮ್ಮದಿಯ ಉಲ್ಲಾಸದ ಜೀವನದ ಕನಸು ಕಾಣುವ ಕನ್ನಡನಾಡಿನ ಪ್ರತಿಯೊಂದು ನರಪ್ರಾಣಿಗೂ ಗೊತ್ತಿದ್ದರೂ ಅನ್ಯಾಯಗಳ ವಿರುದ್ಧ ಎಲ್ಲಂದರಲ್ಲಿ ಹ್ಯಾಗೆಂದರೆ ಹಾಗೆ ಸಿಡಿದೇಳುವ ಸುಬ್ಬಯ್ಯನವರಿಗೇಕೆ ಇಷ್ಟುದಿನ ಗೊತ್ತಾಗಲಿಲ್ಲ ಎಂಬುದು ನಮಗೆ ಕೊಂಚ ಕುತೂಹಲದ ವಿಷಯವಾಗಿತ್ತು. ಸುಬ್ಬಯ್ಯ ಮೈಸೂರಿಗೆ ಬಂದೊಡನೆ ನಮಗೆ ತಿಳಿಸಲು ಪುಟ್ಟೇಗೌಡರಲ್ಲಿ ವಿನಂತಿಸಿಕೊಂಡೆವು.

ಸುಬ್ಬಯ್ಯ ಅನಿರೀಕ್ಷಿತವಾಗಿ ಮೈಸೂರಿಗೆ 20-7-83 ರಂದು ಬಂದರು. ಅವರ ಕಾರ್ಯಕ್ರಮವಿದ್ದ ಹೋಟೆಲ್ ಮಯೂರದಿಂದ ಸುಬ್ಬಯ್ಯನವರನ್ನು ನೋಡಬಹುದೆಂಬ ಸಂದೇಶ ನಮಗೆ ತಕ್ಷಣ

(6ನೇ ಪುಟ ನೋಡಿ)

...ಪ್ಪಳಿ ಹುಳು ಸ್ಥಿತಿಯಿಂದ ವಿಮೋಚನೆ ಪಡೆದು ಚಿಟ್ಟೆಯಾದ ಎ. ಕೆ. ಸುಬ್ಬಯ್ಯನವರೊಡನೆ ಪಂಚಮ ಆಡಿದ ...ಾತುಕತೆ ಇಲ್ಲಿದೆ. ಸುಬ್ಬಯ್ಯ ಬಣ್ಣಬಣ್ಣದ ಮಾತುಗಳಾಡುತ್ತಿದ್ದರು. ಆದರೆ ನಮ್ಮ ಸಂದರ್ಶಕ ಡಿ. ಎಸ್. ...ಗಭೂಷಣ ಸುಬ್ಬಯ್ಯನವರ ಕೆಂಪು ಬಣ್ಣಕ್ಕೆ ಮಾರುಹೋಗಿದ್ದರು....ಹೀಗೆಲ್ಲ ಮರಳು ಮಾಡಿದ ಸುಬ್ಬಯ್ಯ ...ರ ಸಂದರ್ಶನ ಇಲ್ಲಿದೆ.

—ಸಂಪಾದಕ

ಪ್ರತಿಕ್ರಿಯೆ

ದಲಿತಕಲೆ ಸೃಷ್ಟಿಯ ಔದಾರ್ಯವಲ್ಲ

ಡಾ. ಪೋಲಂಕಿ ರಾಮಮೂರ್ತಿಯವರ 'ಸೃಷ್ಟಿಯಲ್ಲಿ ಅಸಮತೆ ಇದೆಯೆ?' ಎಂಬ ಲೇಖನ ಓದಿದೆ ಅವರ ಕಳಕಳಿಯೊಂದಿಗೆ ನಾನು ಸಂಪೂರ್ಣ ಸಹಭಾಗಿ. ಆದರೆ ಡಾ ಎ. ಎಲ್. ಶಿವರುದ್ರಪ್ಪನವರ ನಿಲುವನ್ನು ಖಂಡಿಸಲು ಡಾ. ಪೋಲಂಕಿ ಮಂಡಿಸಿರುವ ವಾದಸರಣಿ ಸರಿಯೆಂದು ನನಗನಿಸುವುದಿಲ್ಲ. ಸೃಷ್ಟಿಯಲ್ಲಿ ಅಸಮತೆ ಇದೆ. ಎಂಬುದನ್ನು ಸೃಷ್ಟಿಯಲ್ಲಿ ಸಮತೆಯಿದೆ ಎಂದುಹೇಳುವುದರ ಮೂಲಕ ಅವರು ಖಂಡಿಸಲು ಯತ್ನಿಸಿದ್ದಾರೆ. ಎರಡೂ ವಾದಗಳು ತಪ್ಪು.

ಸೃಷ್ಟಿ–ಅಥವಾ ಪ್ರಕೃತಿ–ಗೆ ಮನಸ್ಸೆಂಬುದಿಲ್ಲ. ಮನುಷ್ಯ ಸಮಾಜದ ಯಾವ ಮೌಲ್ಯಗಳನ್ನು ಅದರ ಮೇಲೆ ಹೊರಿಸುವಂತಿಲ್ಲ. ಸೃಷ್ಟಿಯ ಅಸಮತೆ, ಸಮತೆಗಳ ಕುರಿತು ಚರ್ಚೆ ಅರ್ಥಹೀನ. ಇದೇ ರೀತಿ ಪಾಪ ಪುಣ್ಯ, ನ್ಯಾಯ ಅನ್ಯಾಯ, ಫಲಾಫಲ ಮುಂತಾದ ಸಂಗತಿಗಳು ಕೂಡ, ನಮ್ಮ ಮಾನದಂಡದಲ್ಲಿ ಒಳ್ಳೆಯವನೆಂದೆನಿಸಿದ ವ್ಯಕ್ತಿ ಅಪಘಾತದಲ್ಲಿ ಕೈ ಕಾಲು ಕಳೆದುಕೊಳ್ಳುತ್ತಾನೆ. ಅಥವಾ ಸತ್ತುಹೋಗುತ್ತಾನೆ. ಏನನ್ಯಾಯವಾಯಿತು! ಎಂದು ನಾವು ಪರಿತಪಿಸುತ್ತೇವೆ. ದೈವ ದೇವರು ಪೂರ್ವಜನ್ಮ ಜನ್ಮಾಂತರ ಮುಂತಾದುವೇ ಇದಕ್ಕೆ ಕಾರಣವೆಂದು ಕೆಲವರು ನಂಬಬಹುದು. ಕಾರಣವನ್ನು ಹುಡುಕುವುದು ಮನುಷ್ಯ ಮನಸ್ಸಿನ ಸಹಜಗುಣ. ನೀವೇ ಹೇಳುವಂತೆ ದೇವರು ಇಲ್ಲದಿರುತ್ತಿದ್ದರೆ ಮನುಷ್ಯರು ಅವನನ್ನು ಸೃಷ್ಟಿಸುತ್ತಿದ್ದರು.

ನಮ್ಮ ಪುರಾಣಕಥೆಗಳಲ್ಲಿ ಸಿನಿಮಾಗಳಲ್ಲಿ ಖಳನಾಯಕರು ಸೋಲುತ್ತಾರೆ. ಒಳ್ಳೆಯ ಆದರ್ಶಗಳನ್ನು ಎತ್ತಿಹಿಡಿಯುವ ನಾಯಕ ಗೆಲ್ಲುತ್ತಾನೆ. ರಾಮಾಯಣ ಮಹಾಭಾರತಗಳು ಹಾಗೂ ಎಲ್ಲಾ ಜನಪದಕತೆಗಳು ಮನುಷ್ಯನಿರ್ಮಿತ. ಪ್ರಕೃತಿ ಅವುಗಳನ್ನು ನಿರ್ಮಿಸಿದ್ದಲ್ಲ, ಇವುಗಳ ಅಧ್ಯಯನದಿಂದ ನಾವು ಮನುಷ್ಯ ಸಮಾಜದ ಬೆಳವಣಿಗೆಯ ಕುರಿತು ತಿಳಿದುಕೊಳ್ಳಬಹುದೇ ವಿನಾ ಪ್ರಕೃತಿಯ ಕುರಿತಾಗಿ ಅಲ್ಲ.

ಡಾ. ದಾನಿಯವರು ''ಸರಿ, ನೀವು ನನಗೆ ಮಾನವ ಜೀವಿಯ ಉದ್ದೇಶವೇನು ಹೇಳಿ, ನಾನು ನಿಮಗೆ ಈ ಸೊಳ್ಳೆಯ ಉದ್ದೇಶವೇನೆಂದು ಹೇಳುತ್ತೇನೆ,'' ಎಂಬ ಮಾತನ್ನು ಡಾ. ಪೋಲಂಕಿ ಅನುಮೋದಕವಾಗಿ ಉದ್ಧರಿಸುತ್ತಾರೆ. ಆದರೆ ಡಾ. ದಾನಿಯವರ ಮಾತಿನ ಅರ್ಥವನ್ನು ಅವರು ಪೂರ್ತಿಯಾಗಿ ಗ್ರಹಿಸಿದಂತಿಲ್ಲ. ಯಾಕೆಂದರೆ ಲೇಖನ ಮುಂದುವರಿದಂತೆ ಡಾ. ಪೋಲಂಕಿ ಸೃಷ್ಟಿಯ ವಾತ್ಸಲ್ಯ, ಸಾಫಲ್ಯ, ಉದ್ದೇಶಗಳ ಬಗ್ಗೆ ಹೇಳುವುದನ್ನು ಕಾಣುತ್ತೇವೆ. ಸೃಷ್ಟಿಗೆ ಇಂತಹ ಯಾವ 'ಗುಣ'ಗಳೂ ಇದ್ದಂತಿಲ್ಲ.

ದಲಿತರನ್ನು ದಲಿತರನ್ನಾಗಿ ಮಾಡಿದುದು ಹೇಗೆ ಸೃಷ್ಟಿಯಲ್ಲವೋ ಹಾಗೆಯೇ ಅವರನ್ನು ಕಲಾವಿದರನ್ನಾಗಿ ಮಾಡಿದುದೂ ಸೃಷ್ಟಿಯಲ್ಲ. ಮಾತ್ರವಲ್ಲ, ಇಂತಹ ವಿಚಾರ ಪೌರುಷವಾದವನ್ನು ಅಲ್ಲಗಳೆದು ನಾವೆಲ್ಲಾ ಹೀಗಿರುವುದಕ್ಕೆಸೃಷ್ಟಿಯೇ ಕಾರಣಎಂಬ ತೀರ್ಮಾನಕ್ಕೆ ನಮ್ಮನ್ನು ನೇರವಾಗಿಕೊಂಡೊಯ್ಯುತ್ತದೆ. ಡಾ. ಪೋಲಂಕಿ ಖಂಡಿತಕ್ಕೂ ಈ ಅಪಾಯದ ಬಗ್ಗೆ ಯೋಚಿಸಿರಲಾರರು. ದಲಿತರು ಹಲವು ಶತಮಾನಗಳ ಕಾಲ ವಿದ್ಯಾಭ್ಯಾಸದಿಂದ ಓದುಬರಹದಿಂದ ವಂಚಿಸಲ್ಪಟ್ಟು ಜನಪದ ಹಾಡುಗಳನ್ನೇ ಅವಲಂಬಿಸಿದ್ದಾರೆ. ದೂರ ಇರಿಸಲ್ಪಟ್ಟ ಕಾರಣ ಅವರು ತಮ್ಮದೇ, ಸಂಗೀತ ಕಲೆ ನೃತ್ಯಗಳನ್ನು ರೂಢಿಸಿಕೊಂಡಿದ್ದಾರೆ. ಇವೆಲ್ಲವೂತುಂಬಾ ಸುಂದರವಾಗಿವೆ. ಗಾಳಿ ಮಳೆ ಮಣ್ಣಿಗೆ ಅತ್ಯಂತ ಸಮೀಪ ಬಾಳಬೇಕಾಗಿ ಬಂದುದರಿಂದ ತಮ್ಮ ಸಂಗೀತನೃತ್ಯಗಳಲ್ಲಿ ಇವುಗಳಿಂದ ಗ್ರಹಿಸಿದ ತಾಳಲಯಗಳನ್ನು ಸೇರಿಸಿದ್ದಾರೆ. ಹೀಗೆನ್ನುವುದಕ್ಕೆ ಬದಲಾಗಿ, ಸೃಷ್ಟಿ ತನ್ನ ಯಾವುದೋ ಔದಾರ್ಯ (!) ದ ಗಳಿಗೆಯಲ್ಲಿ ದಲಿತರಿಗೆ ಈ ಕಲೆಗಳನ್ನು ಕೊಟ್ಟಿತು ಎನ್ನುವುದು ವಿಧಿವಾದವನ್ನು ಇನ್ನೊಂದು ಬಳಸು ರೀತಿಯಲ್ಲಿ ಹೇಳಿದಂತಾಗುತ್ತದೆ.

ದಲಿತರ ಪರಿಸ್ಥಿತಿ ಏನಿದೆಯೋ ಅದು ಸೃಷ್ಟಿ ನಿರ್ಮಿತವಲ್ಲ., ಅದು ಸಮಾಜ ನಿರ್ಮಿತ. ಸಮಾಜ ನಿರ್ಮಿತವಾದ್ದನ್ನು ತಿದ್ದುವುದು ಸಾಧ್ಯವಿದೆ-ಸಾಧ್ಯವಾಗಬೇಕು. ಆದ್ದರಿಂದಲೇ ದಲಿತರ ಹೋರಾಟಕ್ಕೆ ಅರ್ಥವಿರುವುದು. ಸೃಷ್ಟಿ ನಿರ್ಮಿತವಾದ್ದನ್ನು ತಿದ್ದುವುದು ಸಾಧ್ಯವಿಲ್ಲ; ಅಥವಾ ಇಂದಿನ ನಮ್ಮ ಬುದ್ಧಿಯ ಗಡಿಯೊಳಗೆ ಕಷ್ಟ ಸಾಧ್ಯ. ಹೆಣ್ಣು ಗಂಡಿನ ವಿಭಿನ್ನ ರೂಪು ರೇಖೆಗಳು ಸೃಷ್ಟಿದತ್ತ. ಆದರೆ ಮೇಲು ಕೀಳೆನ್ನುವುದು ಅಲ್ಲ. ಕಪ್ಪು ಬಿಳುಪು ಬಣ್ಣಗಳು ಅನುವಂಶಿಕ. ಆದರೆ ಕರಿಯರು ಮತ್ತು ಬಿಳಿಯರು ಸಂಪರ್ಕಮಾಡಬಾರದು ಎನ್ನುವುದು ಅನುವಂಶಿಕವಲ್ಲ.

ಡಾ. ಪೋಲಂಕಿಯವರು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡಿದ್ದರೂ ತಪ್ಪು ವಾದ ಸರಣಿಯಿಂದ ತಾವು ಏನನ್ನು ಖಂಡಿಸಲು ಹೊರಟಿದ್ದಾರೂ ಅದನ್ನು ನಿಜಕ್ಕೂ ಖಂಡಿಸಲು ಅಸಮರ್ಥರಾಗಿದ್ದಾರೆ. ಮಾತ್ರವಲ್ಲ, ದಲಿತ ನಿಜವಾದ ಪರಿಸ್ಥಿತಿ ಅವರ ಲೇಖನ ಮರೆಸುತ್ತದೆ.

—ಕೆ. ವಿ. ತಿರುಮಲೇಶ್
ಹೈದರಾಬಾದ್

ಪುಟ್ಟರಾಮು ಕೊಲೆಯಾದರೆ ದಲಿತ ಸಂಘರ್ಷ ಸಮಿತಿ ಹೊಣೆ

ಕಳೆದ ಸಂಚಿಕೆಯಲ್ಲಿ ''ಮತ್ತೆ ಸಾವಿನ ದವಡೆಯಲ್ಲಿ ದಾರಿದೀಪ ಪುಟ್ಟರಾಮು'' ಓದಿ ಸ್ಥಿತಿಯ ಬಗ್ಗೆ ದುಃಖವಾಯಿತು.

ಕಳೆದ ಏಪ್ರಿಲ್ ತಿಂಗಳಿಂದ ಸತತವಾಗಿ ಸಾವಿನ ದವಡೆಯಲ್ಲಿ ಸಿಕ್ಕಿಬಿದ್ದಿರುವ ಪುಟ್ಟರಾಮುವನ್ನು ಬಚಾವು ಮಾಡಲು ದಲಿತ ಸಂಘರ್ಷ ಸ ಮಿ ತಿಯಂತ 'ಕ್ರಾಂತಿಕಾರಿ' ಸಂಘಟನೆ ಕೂಡ ಏನೊಂದೂ ಪ್ರಯತ್ನ ಮಾಡದೆ ಇರುವುದನ್ನು ನೋಡಿದರೆ ಇದೂ ಕೂಡ (ಸಂಪಾದಕರು ಬರೆದಿರುವಂತೆ) ದಲಿತರು ಸತ್ತ ಮೇಲೆ ಕೂಗಾಡುವ ಸಂಘಟನೆ ಇರಬಹುದೆ ಎಂಬ ಅನುಮಾನ ಮೂಡತೊಡಗಿದೆ.

ದಲಿತರ ಮಾನ–ಪ್ರಾಣ ರಕ್ಷಣೆ ಮಾಡುವಂತ ಸಂಘಟನೆ ನಮ್ಮ ದಲಿತ ಸಂಘರ್ಷ ಸಮಿತಿ ಎಂದು ನಂಬಿಕೊಂಡಿದ್ದ ನನ್ನ ನಂಬಿಕೆಗೆ ಭಾರಿ ಆಘಾತವಾಗಿದೆ.

ಪುಟ್ಟರಾಮು ಅವರ ಸ್ಥಿತಿಯನ್ನು ದುಃಖದಿಂದ ವಿವರವಾಗಿ ಬರೆದಿರುವ ಕೆ. ಎನ್. ಗುರುಪ್ರಸಾದ್ ಅವರು ಕೊನೆಯಲ್ಲಿ ಒಂದು ಪಕ್ಷ ಮುಂದೆ ಪುಟ್ಟರಾಮುರವರ ಕೊಲೆಯಾದರೆ ಆ ಕೊಲೆಗೆ ನಮ್ಮ ಮುಖ್ಯಮಂತ್ರಿ ಹೆಗಡೆ, ರಘುಪತಿ, ಮಂಡ್ಯಜಿಲ್ಲಾಧಿಕಾರಿ ಆಚಾರ್ಯ ಮತ್ತು ಉನ್ನತ ಪೋಲೀಸ್ ಅಧಿಕಾರಿಗಳೇ ಹೊಣೆ'' ಎಂದಿದ್ದಾರೆ.

ಆದರೆ ನಾನು ಹೇಳುತ್ತಿದ್ದೇನೆ : ''ಒಂದು ಪಕ್ಷ ಪುಟ್ಟರಾಮು ಕೊಲೆಯಾದರೆ ಆ ಕೊಲೆಗೆ ನಿಷ್ಕ್ರಿಯ ದಲಿತ ಸಂಘರ್ಷ ಸಮಿತಿಯೇ ಹೊಣೆ''.

—ಚಿಕ್ಕಸಿದ್ದಯ್ಯ ಮಂಡ್ಯ

ಜಾತೀಯತೆ ಸುಳಿಯಲ್ಲಿ ಬೋವಿ ಜನಾಂಗದ ಸಮ್ಮೇಳನ

ಕರ್ನಾಟಕ ರಾಜ್ಯ ಮಟ್ಟದ ಬೋವಿ ಜನಾಂಗದ ಸಮ್ಮೇಳನವು ಪ್ರಾಮಾಣಿಕವಾದ ಆತ್ಮಶೋಧನೆಗಿಂತ ರಾಜಕೀಯ ಸ್ಟಂಟ್ ಮಾಡುವುದರಲ್ಲೇ ಮುಕ್ತಾಯಗೊಂಡಿತು. ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವ ಈ ಜನಾಂಗದವರು ತಾವು ಅಸ್ಪೃಶ್ಯರಲ್ಲ, ಸ್ಪೃಶ್ಯರು ಎಂದು ಹೆಮ್ಮೆಯಿಂದ ಬೀಗುತ್ತಾರೆ. ಕಾಲದೆಂಬಂತೆ ಪರಿಶಿಷ್ಟ ಜಾತಿಗಳಪಟ್ಟಿಯಲ್ಲಿರುವ ಇತರ ಜಾತಿಗಳವರನ್ನು ಕೀಳು ದೃಷ್ಟಿಯಿಂದ ನೋಡುತ್ತಿರುವುದು, ಜಾತಿಪದ್ಧತಿಯ ನಾಶದ ಬಗೆ ಯೋಚಿಸದಿರುವುದು ವಿಷಾದಕರ ಅಂಶ.

ಪರಿಶಿಷ್ಟ ಜಾತಿ–ಪರಿಶಿಷ್ಟವರ್ಗಗಳ ಜನರಷ್ಟೇ ಅಲ್ಲ ಇತರ ಹಿಂದುಳಿದ ಜಾತಿಗಳ ಬಡವರೂ ಸಹ ಒಂದುಗೂಡಿ ಇಡೀ ಸಮಾಜ ಬದಲಾವಣೆಗಾಗಿ ಪ್ರಯತ್ನ ನಡೆಯಬೇಕಾಗಿರುವ ಈ ಸಮಯದಲ್ಲಿ ಹೀಗೆ ಯಾವುದೋ ಒಂದು ಜಾತಿಯವರು ರಾಜ್ಯ ಸಮ್ಮೇಳನಗಳನ್ನ ಮಾಡುತ್ತಾ ಹೋದಂತೆ ಜಾತಿಪದ್ಧತಿಯ ಬೇರುಗಳು ಬಲಗೊಳ್ಳುತ್ತಾ ಹೋಗುವುದಷ್ಟೇ ಅಲ್ಲ ರಾಜಕೀಯ ಪುಢಾರಿಗಳು ಮುಗ್ಧರನ್ನು ಸುಲಿಯುವುದೂ ಸಹ ಮುಂದುವರೆಯುತ್ತದೆ. ಪ್ರಜ್ಞಾವಂತ ಬೋವಿ ಜನಾಂಗದ ಯುವಜನರು ಇದನ್ನರ್ಥ ಮಾಡಿಕೊಳ್ಳುವರೇ?

ರಾಜ್ಯದಲ್ಲಿ 40 ಲಕ್ಷ ಜನಸಂಖ್ಯೆ ತಮ್ಮದಿದೆಯೆಂದು ಹೇಳಿಕೊಂಡು ಬೋವಿ ಕ್ಷೇಮಾಭ್ಯುದಯ ಸಂಘವು ದಿನಾಂಕ 11ನೇ ಜುಲೈ 83 ರಂದು ಪ್ರಥಮ ರಾಜ್ಯ ಮಟ್ಟದ ಬೋವಿ ಜನಾಂಗದ ಸಮ್ಮೇಳನವನ್ನು ಚಿತ್ರದುರ್ಗದಲ್ಲಿ ನಡೆಸಿತು. ಜನತಾಪಕ್ಷದ ಸೀಸಿ ಹೊಡೆಯುವುದರಿಂದಲೇ ಪ್ರಾರಂಭವಾಗಿ ಅದರಿಂದಲೇ ಮುಕ್ತಾಯಗೊಂಡ ಈ ಸಮ್ಮೇಳನ ದಲಿತ ಜಾತಿಗಳಿಗೆ ಹಿಡಿದಿರುವ ಅಜ್ಞಾನದ–ಸ್ವಾರ್ಥದ ಭೂತವನ್ನು ಪ್ರದರ್ಶಿಸಿತು. ಮುಗ್ಧ ಹಳ್ಳಿಗರಿಂದ ಜಿ. ಬಸವಣ್ಣಪ್ಪನಿಗೆ ಜೈಕಾರ ಹಾಕಿಸಿದ್ದು, ಬೋವಿ ಜನಾಂಗದ ನಿವೃತ್ತ ಐ. ಎ. ಎಸ್. ಅಧಿಕಾರಿ ಹನುಮಂತಪ್ಪ, ಎಸ್. ನಿಜಲಿಂಗಪ್ಪನವರನ್ನು ದೇವರೆಂದು ಹಾಡಿ ಹೊಗಳಿದ್ದು, ಕಾಂಗ್ರೆಸ್ ಎಂದೂ ಕೊಟ್ಟಿರದಿದ್ದ ಮಂತ್ರಿ ಪದವಿಯನ್ನು ತಮ್ಮ ಜನಾಂಗದ ಬಸವಣ್ಣಪ್ಪಗೆ ನೀಡಿ ಮಹದುಪಕಾರ ಮಾಡಿದೆ, ಕಾರಣ ಬೋವಿ ಜನಾಂಗದವರೆಲ್ಲ ಕಾಂಗ್ರೆಸ್ ಬಗ್ಗೆ ಮರು ವಿಚಾರ ಮಾಡಬೇಕೆಂದು ಕರೆ ನೀಡಿದ್ದು ಈ ಸಮ್ಮೇಳನದಲ್ಲಿ ಕಂಡು ಬಂದ ಕಮಂಗಿತನದ ವಿಷಯಗಳು.

ಈ ರಾಜ್ಯ ಸಮ್ಮೇಳನದ ಸಂಚಾಲಕ ಎಚ್. ರಾಮಪ್ಪನ ಬಣ್ಣ ಬಯಲಾಗಿದ್ದರೂ ಸರ್ಕಾರವನ್ನು ಒಲಿಸಿಕೊಳ್ಳಲು ನಡೆಸಿದ್ದ ಈ ನಾಟಕದಲ್ಲಿ ಸುಮಾರು 800 ಜನರು ಸೇರಿದ್ದರು. 'ಇದರಿಂದ ಯಾರಿಗೆ ಅನುಕೂಲವಾಗುತ್ತೆ ಸ್ವಾಮಿ ನಾಕಾರು ಜನ ನಂ ಜಾತಿಯೋರೆ ಎಲ್ಲಾ ಹೊಡೆದುಕೊಂಡ್ತಾರೆ' ಎಂದು ಬೋವಿ ಜನಾಂಗದ ಗ್ರಾಮೀಣ ವೃದ್ಧರೊಬ್ಬರು ಗೊಣಗುತ್ತಿದ್ದರು. ಈ ಸಮ್ಮೇಳನದ ವ್ಯವಸ್ಥೆಗಾಗಿ ರಾಜ್ಯದ ವಿವಿಧ ಇಲಾಖೆಗಳಲ್ಲಿರುವ ಬೋವಿ ಜನಾಂಗದ ನೌಕರರಿಂದ ಹಣ ಸಂಗ್ರಹಿಸಲಾಗಿದೆ. ಇಡೀ ಸಮ್ಮೇಳನದ ಮುಂದಾಳುಗಳು ಬಸವಣ್ಣಪ್ಪ, ನೆಲಮಂಗಲದ ಶಾಸಕ ಸತ್ಯನಾರಾಯಣ ಅವರ ಬಗ್ಗೆ ಮಾತಾಡುತ್ತಿದ್ದನ್ನು ನೋಡಿದರೆ ಈ ಸಮ್ಮೇಳನದ ಏರ್ಪಾಡಿನ ಹಿಂದೆ ಅವರ ಕೈವಾಡವೂ ಇದೆಯೆಂಬುದನ್ನು ಸರಳವಾಗಿ ಊಹಿಸಬಹುದಾಗಿತ್ತು.

ಜಾತಿಪತ್ರ ನೀಡುವಿಕೆಯಲ್ಲಿ ಆಗುತ್ತಿರುವ ತೊಂದರೆಯನ್ನು ಅಧಿಕಾರಿಗಳಿಗೆ ಸರಿಯಾಗಿ ತಿಳಿಸಿ ಹೇಳಿ ಸರಿಪಡಿಸಬೇಕು; ಮೀಸಲಾತಿಯನ್ನು ಮದ್ರಾಸ್ ಪ್ರಾಂತದಲ್ಲಿರುವಂಥ ವ್ಯವಸ್ಥೆಯಲ್ಲಿ ಸರಿಯಾಗಿ ಜಾರಿಗೆ ತರಬೇಕು; ಪ್ರತಿಭಾವಂತ ಬೋವಿ ಜನಾಂಗದ ಯುವಕರನ್ನು ನೇರವಾಗಿ ನೇಮಕ ಮಾಡಿಕೊಳ್ಳಬೇಕು; ಗ್ರಾಮೀಣ ಪ್ರದೇಶಗಳಲ್ಲಿರುವ ಬೋವಿ ಜನಾಂಗದವರಿಗೆ ಜಮೀನು ಸೈಟುಗಳನ್ನು ನ್ಯಾಯವಾಗಿ ಹಂಚಬೇಕು; ಅಲೆದಾಟದ ಜೀವನ ನಡೆಸುವ ಬೋವಿ ಜನರಿಗೆ ಜಮೀನು ಹಂಚಿ ಒಂದೆಡೆ ನೆಲೆಸುವ ಏರ್ಪಾಟು ಮಾಡಬೇಕು ಎಂಬಿವೇ ಬೇಡಿಕೆಗಳನ್ನು ಸಮರ್ಪಿಸಲಾಯಿತು. ರಾಜ್ಯ ಸಂಪುಟದಲ್ಲಿರುವ ಬೋವಿ ಜನಾಂಗದ ಬಸವಣ್ಣಪ್ಪನವರೊಂದಿಗೆ ಇನ್ನೊಬ್ಬರನ್ನಾದರೂ —ಎಂ. ಜಿ. ಸತ್ಯನಾರಾಯಣ ಅವರನ್ನು– ಮಂತ್ರಿಗಳನ್ನಾಗಿ ಮಾಡಬೇಕೆಂಬುದು ವಿಶೇಷ ಬೇಡಿಕೆಯಾಗಿತ್ತು.

ಏಕಲವ್ಯ

ಜಾತಿ–ಉಪಜಾತಿಗಳ ಸಮ್ಮೇಳನಗಳನ್ನು ನಡೆಸುವುದು ಜಾತಿಪದ್ಧತಿಯನ್ನು ಬಲಗೊಳಿಸಿದಂತೆ, ಅಷ್ಟೇ ಅಲ್ಲದೇ ಹೀಗೆ ಯಾವುದೋ ಒಂದು ರಾಜಕೀಯ ಪಕ್ಷದ ಭಟ್ಟಂಗಿಯಾಗುವುದು ಅತ್ಯಂತ ನೀಚತನವೆಂಬುದು ದಲಿತ ಜಾತಿಗಳಿಗೆ ಅರ್ಥವಾಗುವುದು ಎಂದು? ತಮ್ಮ ಕುರ್ಚಿಯ-ಹಣದ ಸೇವೆಗಾಗಿ ಜನಾಂಗವನ್ನೇ ಗುಲಾಮರನ್ನಾಗಿಸಿ ತಾವುಸೇರಿರುವ ಪಕ್ಷದೊಂದಿಗೆ ಕರೆದೊಯ್ಯುವಂಥ ತಲೆಹಿಡುಕ ಕೆಲಸವನ್ನು ಬಸವಣ್ಣಪ್ಪ–ಸತ್ಯನಾರಾಯಣರಂಥ ಕೂಟವು ಮಾಡುತ್ತಿರುತ್ತದೆಂಬುದನ್ನು ದಲಿತ ಜಾತಿಗಳು ಬೇಗ ಅರಿತುಕೊಂಡಷ್ಟೂ ಒಳ್ಳೆಯದು. ಎಂಥೆಂಥದೋ ಸೊಸೈಟಿಗಳನ್ನು ಮಾಡಿಕೊಂಡು ಬುಲೆಟ್‌ಗಳಲ್ಲಿ ಮೆರೆದಾಡುವ ರಾಮಪ್ಪಗಳು ಇಂಥ ಸಮ್ಮೇಳನವನ್ನು ಯಾವ ಫಲಾಪೇಕ್ಷೆಯಿಲ್ಲದೇ ಮಾಡುವಂಥವರೆಂದು ತಿಳಿಯುವಷ್ಟು ಮೂರ್ಖರು ಯಾರೂ ಇಲ್ಲ. ದಲಿತ ಜಾತಿಗಳು ತಮ್ಮ ಉದ್ಧಾರ ಅಧಿಕಾರದಲ್ಲಿರುವ ಸರ್ಕಾರದೆದುರು ಕೈ ಹೊಸೆದು ನಿಲ್ಲುವುದರಿಂದ; ಮಂತ್ರಿ–ಶಾಸಕರನ್ನು ಇಂದ್ರ–ಚಂದ್ರರೆಂದು ಹೊಗಳುವುದರಿಂದ" ಎಂದು ತಿಳಿಯುವುದಕ್ಕಿಂತ ದುರಂತ ಬೇರಾವುದೂ ಇಲ್ಲ.

ವಿದ್ಯಾವಂತ–ಪ್ರಜ್ಞಾವಂತ ಬೋವಿ ಜನರು ಯಾವ ರಾಜಕೀಯ ಪಕ್ಷದ ಬಾಲಗಳಾಗದೇ ಸುಸಂಘಟಿತರಾಗಿ ಸಂಘರ್ಷದ ದಾರಿ ಹಿಡಿಯದೇ ಹೋದರೆ ಇಡೀ ಜನಾಂಗಕ್ಕೆ ಚಿಪ್ಪು ಸಿಗುತ್ತದೆ; ಎಲ್ಲೋ ಕೆಲವರಿಗೆ ಫಲ ಸಿಗುತ್ತದೆ. ಪರಿಶಿಷ್ಟ ಜಾತಿಗಳಲ್ಲಿ ಒಂದಾಗಿರುವ ಬೋವಿ ಜನಾಂಗದವರು ಸಮ್ಮೇಳನ ಮಾಡಿದಂತೆ ಎಲ್ಲಾ ಪರಿಶಿಷ್ಟ ಜಾತಿಗಳವರು ತಂತಮ್ಮ ಉಪಜಾತಿಯ ಸಮ್ಮೇಳನ ಮಾಡುತ್ತಾ ಸಾಗಿದರೆ ಜಾತಿಪದ್ಧತಿಯ ನಾಶ ಹೇಗೆ? ಬೋವಿ ಜನಾಂಗದ ಹಾಗೂ ದಲಿತ ಜಾತಿಗಳ ಯುವ ಜನ ಗಂಭೀರವಾಗಿ ಈ ಬಗೆ ಚಿಂತಿಸಬೇಕು.

ನೂತನ ಸರಕಾರದ ವಿನೂತನ ಕಾರ್ಯಕ್ರಮಗಳು

- ಹರಿಜನ ಗಿರಿಜನ ಹಾಗೂ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿ ಸರ್ಕಾರದ ಆದ್ಯ ಕರ್ತವ್ಯ-ಅವರ ಆರ್ಥಿಕ ಹಾಗೂ ಸಾಮಾಜಿಕ ಏಳಿಗೆಗಾಗಿ ಅಗತ್ಯವಾದ ನಿರ್ದಿಷ್ಟ ಸಲಹೆಗಳನ್ನು ಮಾಡಲು ಸರ್ಕಾರ ಹಿಂದುಳಿದ ವರ್ಗಗಳ ಆಯೋಗ ಮತ್ತು ಅಲ್ಪಸಂಖ್ಯಾತರ ಆಯೋಗವನ್ನು ರಚಿಸಿದೆ.

ಹರಿಜನ-ಗಿರಿಜನ ಯುವಜನಾಂಗದ ಪ್ರತಿಭಾ ಪುರಸ್ಕಾರಕ್ಕಾಗಿ ಪ್ರಾಯಶಃ ದೇಶದಲ್ಲೇ ಪ್ರಥಮವಾದ ವಿನೂತನ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಅದರಂತೆ ರಾಜ್ಯದ ವಿಶ್ವವಿದ್ಯಾನಿಲಯಗಳಿಂದ, ವಿವಿಧ ವಿಷಯಗಳಲ್ಲಿ ಪದವಿ ಪಡೆದ 87 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರತಿ ವರ್ಷ ಕರ್ನಾಟಕ ಸರ್ಕಾರದ ಅಧಿಕಾರಿ ವರ್ಗಕ್ಕೆ ನೇರವಾಗಿ ನೇಮಿಸಿಕೊಳ್ಳಲಾಗುವುದು.

'ಅಂತ್ಯೋದಯ'-ರಾಜ್ಯದ ಪ್ರತಿ ಹಳ್ಳಿಯಲ್ಲಿ ಐದು ಕಡು ಬಡ ಕುಟುಂಬಗಳನ್ನು ಆಯ್ಕೆ ಮಾಡಿ, ಅವರಿಗೆ ಸ್ವಾವಲಂಬಿಗಳಾಗಲು ಎಲ್ಲ ಸೌಲಭ್ಯ ಒದಗಿಸಿ ಬಡತನದ ರೇಖೆಯಿಂದ ಮೇಲೆತ್ತುವ ಕ್ಷೇಮಾಭ್ಯುದಯ ಯೋಜನೆ.

ರೈತರ ವಿವಿಧ ರೀತಿಯ ಸಹಕಾರೀ ಸಾಲ ಮರುಪಾವತಿಯಲ್ಲಿ ಸುಮಾರು ಮುವತ್ತಾರು ಕೋಟಿ ರೂಪಾಯಿ ಪರಿಹಾರ ಕೊಡಲಾಗಿದೆ. ಸರ್ಕಾರಕ್ಕೆ ಸಂದಾಯವಾಗದೆ ಉಳಿದಿರುವ ಸರ್ಕಾರೀ ಸಾಲಗಳ ಮನ್ನಾ. ಭೂಸಾರ ರಕ್ಷಣೆ ಮತ್ತು ಒಡ್ಡು ನಿರ್ಮಾಣದ ಬಾಕಿಯಲ್ಲಿ ಅರ್ಧ ಭಾಗವನ್ನು ನಿಯಮಿತ ಅವಧಿಯ ಒಳಗೆ ತೀರಿಸಿದರೆ, ಉಳಿದರ್ಧ ಮನ್ನಾ. ಜೊತೆಗೆ ಸಹಕಾರಿ ಸಾಲಗಳ ಮರುಪಾವತಿಯಲ್ಲಿ ರಿಯಾಯಿತಿ.

ಹಿಂದುಳಿದ ವರ್ಗಗಳ, ಕುಶಲಕರ್ಮಿಗಳ ಉಪಯೋಗಕ್ಕಾಗಿ ಸಾಧನ, ಸಲಕರಣೆಗಳನ್ನು ಒದಗಿಸುವ ಕೈಗಾರಿಕಾ ಕೇಂದ್ರಗಳನ್ನು ರಾಜ್ಯದ ವಿವಿಧ ಕಡೆ ಸ್ಥಾಪಿಸಲಾಗುವುದು.

ವೃದ್ಧಾಪ್ಯವೇತನ ಹಾಗೂ ಅಂಗವಿಕಲರಿಗೆ ಕೊಡುವ ಮಾಸಾಶನವನ್ನು ಐವತ್ತು ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಜಾತ್ಯಾಂಧ ಗುರು ರಾಘವೇಂದ್ರಾಯ ನಮಃ

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಚಾಲ್ತಿಯಲ್ಲಿರುವ ದೇವರೆಂದರೆ ರಾಘವೇಂದ್ರಸ್ವಾಮಿ. ಈತ ಎಲ್ಲಾ ಜಾತಿಯವರಿಂದ ಆಕರ್ಷಿಸಲ್ಪಟ್ಟ ದೇವರು. ಹೀಗೆ ಮನಸೋತ ನಾನು ದಿನಾಂಕ 11-7-83 ರಂದು ಕುಟುಂಬಸಮೇತ ಮಂತ್ರಾಲಯದ ಕಡೆಗೆ ಪ್ರಯಾಣ ಬೆಳೆಸಿದೆ. ನನ್ನ ಪತ್ನಿಯ ಒತ್ತಾಯದ ಮೇರೆಗೆ ಹೋದವನಾದ ನನಗೆ ಅಲ್ಲಿ ಎರಡು ಕೆಲಸಗಳಾಗಬೇಕಿತ್ತು : ಒಂದು ನನ್ನ ಜೇಷ್ಠ ಪುತ್ರಿಯ ಜನನ ಗುರುವಾರವಾದುದರಿಂದ ಅವಳಿಗೆ ಮಂತ್ರಾಲಯದಲ್ಲಿ ನಾಮಕರಣವಾಗಬೇಕೆಂಬ ಹಂಬಲ, ಎರಡನೆಯದಾಗಿ ಶೂದ್ರರೆಲ್ಲರು ಬ್ರಾಹ್ಮಣರಿಗಿಂತ ಹೆಚ್ಚಾಗಿ ಈ ರಾಘವೇಂದ್ರನನ್ನು ಆರಾಧಿಸುತ್ತಿರುವ ಕಾಲದ ಮಹಿಮೆಯ ಹಿನ್ನಲೆಯನ್ನು ತಿಳಿಯುವಿಕೆ.

ತುಂಗಭದ್ರಾ ನದಿಯಲ್ಲಿ ಮೈ ಕೊರೆಯುವ ಚಳಿಯಲ್ಲಿ ಸ್ನಾನ ಮಾಡಿ, ಬಟ್ಟೆಯಿದ್ದೂ ತಿರುಕನಂತೆ ನನ್ನ ಮೈಮೇಲಿನ ಬಟ್ಟೆಯನ್ನು ಕಳಚಿ ಕ್ಯೂನಲ್ಲಿ ನಿಂತೆ. ಬೆಳಿಗ್ಗೆ ಸುಮಾರು 8 ಗಂಟೆಗೆ ನಿಂತ ನಮಗೆ ದೇವರ ದರ್ಶನವಾದದ್ದು ಮಧ್ಯಾಹ್ನ ಒಂದು ಗಂಟೆಗೆ. ಸಾಲ ಮಾಡಿ ತೆಗೆದುಕೊಂಡು ಹೋಗಿದ್ದ ಹಣದಲ್ಲಿ ಸ್ವಲ್ಪ ಹಣವನ್ನು ಹುಂಡಿಯಲ್ಲಿ ಹಾಕುವಂತೆ ಒತ್ತಾಯಿಸಿದ ನನ್ನ ಹೆಂಡತಿಯ ಮೇಲೆ ಮೈ ಉರಿಯುವಷ್ಟು ಕೋಪ ಬಂದು ಚಿಂತಿಸತೊಡಗಿದೆ. ತಕ್ಷಣ ನನ್ನ ಮಗಳ ನಾಮಕರಣ ಜ್ಞಾಪಕಕ್ಕೆ ಬಂತು. ಬೀಳುವುದನ್ನೂ ಕಾಣದೆ ನಾಮಕರಣದ ಟಿಕೆಟ್ ಪಡೆಯಲು ದೇವಸ್ಥಾನದ ಮುಂಬದಿಗೆ ಓಡಿದೆ. ಅಲ್ಲಿ 32 ರೂ.ಗಳ ರಶೀತಿ ಪಡೆದು, ಟಿಕೆಟ್ ಕೊಡುತ್ತಿದ್ದವನ ಆದೇಶದ ಮೇರೆಗೆ ಪುರೋಹಿತನನ್ನು ಕಂಡುಹಿಡಿಯಲು ಒಂದು ಸಂಶೋಧನೆಯನ್ನೇ ಮಾಡಬೇಕಾಯಿತು. ಕೊನೆಗೂ ಸಿಕ್ಕಿದ ಪುರೋಹಿತ ನನ್ನ ಭಾಷೆ, ಬಣ್ಣ

ಅನುಭವದ ಗೋಣಿಯಿಂದ

ಗಳಿಂದ ನನ್ನ ಜಾತಿಯನ್ನು ಪತ್ತೆಹಚ್ಚಿದವನಂತೆ 25 ರೂ.ಗಳನ್ನು ಕೊಡಬೇಕೆಂದೂ ನಾಮಕರಣ ಮಾಡುವುದಾಗಿಯೂ ತಿಳಿಸಿದ. ಚಿಂತೆಯಾದರೂ ಕೊಡಲು ಒಪ್ಪಿದೆ. ಇಷ್ಟಾದರೂ ಆತ ಕೊನೆಗೆ ಅಮಾವಾಸ್ಯೆಯ ನೆಪ ಹೇಳಿ ನಾಮಕರಣದಿಂದ ಜಾರಿಕೊಂಡ. ನನ್ನ ಮೈಯಲ್ಲಿ ವಿದ್ಯುತ್ ಹರಿದಂತಾಯಿತು. ಆಶ್ಚರ್ಯದಿಂದ ನನ್ನ ಹೆಂಡತಿಗೆ ಜಾತಿಯ ಬಗ್ಗೆ ಉಸುರಿದೆ. ಬೆಳಗಿನಿಂದ ಊಟವಿಲ್ಲದೆ ಹೊಟ್ಟೆ ಬೇರೆ ತಾಳ ಹಾಕುತ್ತಿತ್ತು. ಧರ್ಮಸ್ಥಳ ಎಂದಮೇಲೆ ಪುಕ್ಕಟೆ ಊಟ ಸಿಗಬಹುದೆಂದು ಲೆಕ್ಕಾಚಾರ ಮಾಡಿದ್ದೆ. ಆದರೆ 2-50 ಪೈಸೆಗೆ ಊಟದ ಟಿಕೆಟ್ ಕೊಡುತ್ತಿದ್ದ ಕೌಂಟರಿನತ್ತ ನನ್ನ ದೃಷ್ಟಿ ಹರಿಯಿತು. ಭೋಜನ ಶಾಲೆಯತ್ತ ನಡೆದೆವು. ಅಲ್ಲಿ ಬ್ಲಾಕ್ ನಂ. ೧ ಮತ್ತು ೨ ಎಂದು ಬೋರ್ಡುಗಳಿದ್ದವು. ಬ್ಲಾಕ್ ನಂಬರ್ ೪ ಎಂದು ಮತ್ತೊಂದಿತ್ತು. (ಇದು ಬ್ರಾಹ್ಮಣರಿಗೆ ಮಾತ್ರ ಮೀಸಲು ಎಂದು ನಂತರ ತಿಳಿಯಿತು).

ನನ್ನ ಮೈಮೇಲೆ ಬಟ್ಟೆ ಇಲ್ಲದ್ದರಿಂದ, ಜನಿವಾರ ಇಲ್ಲವೆಂದು ಸ್ಪಷ್ಟವಾಗಿ ಕಾಣುತ್ತಿದ್ದರಿಂದ ೪ನೇ ಬ್ಲಾಕಿಗೆ ನಮಗೆ ಪ್ರವೇಶ ದೊರೆಯಲಿಲ್ಲ! ೧ ಮತ್ತು ೨ರಲ್ಲಿ ಬಾಗಿಲನ್ನು ಮುಚ್ಚಿದ್ದು ಒಳಗೆ ಜನ ಉಣ್ಣುತ್ತಿದ್ದರು. ಇಷ್ಟೆಲ್ಲ ಅವಮಾನಗಳ ನಡುವೆಯೂ ಈ ಬ್ರಾಹ್ಮಣೇತರರು ಉಣ್ಣುತ್ತಿದ್ದಾರಲ್ಲ ಎಂದು ಆಶ್ಚರ್ಯವಾಯಿತು! ಸಾವರಿಸಿಕೊಂಡ ಮೇಲೆ ನನ್ನ ಹೊಟ್ಟೆ ಒಳಗೂ ಬೆಂಕಿ ಬಿದ್ದಿದೆ ಅನ್ನಿಸಿತು. ಅಂತೂ ಊಟಕ್ಕೆ ಕೂತೆವು.

ಆದರೆ ಅನ್ನ ಗಂಟಲಿಂದ ಒಳಗೆ ಹೋಗಲಿಲ್ಲ. ನಾ ಕಲಿತು ಈಗ ವಿದ್ಯಾರ್ಥಿಗಳಿಗೆ ಕಲಿಸುತ್ತಿರುವ ಸಮಾಜಶಾಸ್ತ್ರ ನನ್ನನ್ನು ನೋಡಿ ನಗುತ್ತಿದೆ ಎನ್ನಿಸಿತು.

—ಎನ್. ದೊಡ್ಡಸಿದ್ದಪ್ಪ

ದಲಿತ ಯುವಕರಿಗೆ ಕಸರತ್ತು

ಯಾವುದೇ ಒಂದು ಜನಾಂಗದ ಭವಿಷ್ಯವನ್ನು ನಿರೀಕ್ಷಿಸಬೇಕಾದರೆ ಆ ಜನಾಂಗದ ಯುವಕರನ್ನು ಪರೀಕ್ಷಿಸಬೇಕು. ಏಕೆಂದರೆ ವಿದ್ಯಾರ್ಥಿಯುವಕರು ಒಳ್ಳೆಯ ಚಾರಿತ್ರ್ಯವುಳ್ಳವರೂ, ಧೈರ್ಯವಂತರೂ ಕಾರ್ಯಪ್ರವರ್ತಕರು ಆಗಿದ್ದರೆ ನಿಜವಾಗ್ಲೂ ಆ ಜನಾಂಗ ಪ್ರಬಲವಾಗಿ ಬೆಳೆಯುವುದರಲ್ಲಿ ಯಾವುದೇ ಸಂದೇಹ ಪಡುವಂತಿಲ್ಲ. ಅಪ್ಪಿ-ತಪ್ಪಿ ಆ ಯುವಜನಾಂಗ ಹೊಣೆಗೇಡಿಗಳಾಗಿದ್ದರೆ, ಅಸಮರ್ಥರಾಗಿದ್ದರೆ, ಹಿಂದಿನ ಕಂದಾಚಾರಗಳನ್ನು ಪ್ರಚಾರಪಡಿಸುವುದರಲ್ಲಿದ್ದರೆ, ಮತ ಮೌಢ್ಯಗಳಿಗೆ ಬಲಿಯಾಗಿದ್ದರೆ, ಈಗಿನ ಪ್ರಸ್ತುತ ಪರಿಸ್ಥಿತಿಯನ್ನು ಪ್ರೋತ್ಸಾಹಿಸುವವರಾಗಿದ್ದರೆ ನಿಜಕ್ಕೂ ಆ ಜನಾಂಗದ ಭವಿಷ್ಯ ಕರಾಳಮಯವಾಗಿ ಕತ್ತಲಲ್ಲಿ ಬದುಕಿ ಬಾಳಬೇಕಾಗುತ್ತದೆ. ಇದನ್ನರಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಕಾರ್ಯಕ್ರಮಗಳಲ್ಲಿ ಯುವಕರ ಪಾತ್ರವನ್ನು ಪ್ರಮುಖವನ್ನಾಗಿರಿಸಿದೆ. ಅದರಂತೆ ಗೌರೀಬಿದನೂರು ತಾಲ್ಲೂಕು ಶಾಖೆಯ ಮೂರು ದಿನಗಳ ಕಾರ್ಯಕರ್ತರ ಅಧ್ಯಯನ ಶಿಬಿರವನ್ನು ದಿನಾಂಕ 8, 9 ಮತ್ತು 10ರ ಜುಲೈ ತಿಂಗಳಲ್ಲಿ ನಗರಗೆರೆಹೋಬಳಿಯ ಗುಂಡ್ಲುಕೊತ್ತೂರು ಗ್ರಾಮದಲ್ಲಿ ಏರ್ಪಡಿಸಿತ್ತು. ತಾಲ್ಲೂಕು ಸಮ್ಮೇಳ ಮಾಡಿಸುವುದರ ಪೂರ್ವಭಾವಿಯಾಗಿ ಕೇವಲ 20 ಜನರೊಳಗೊಂಡ ಈ ಶಿಬಿರ ಊರಚೆ ಇರುವ ಒಂದು ಹುಲ್ಲುಗುಡಿಸಲಲ್ಲಿ ಏರ್ಪಡಿಸಿತ್ತು. ಬಿ. ಗಂಗಾಧರಮೂರ್ತಿಯವರು ಮೊದಲ ದಿನದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡುತ್ತಾ ಕಾರ್ಯಕರ್ತರಲ್ಲಿ ಧೈರ್ಯ, ಸ್ಥೈರ್ಯ ಸ್ವಾಭಿಮಾನ, ಸಂಘಟನೆಯ ಜವಾಬ್ದಾರಿಗಳನ್ನು ಮತ್ತು ಇಂದಿನ ಸಂಘಟನೆಯಲ್ಲಿ ಯುವಕರ ಪಾತ್ರ ಮಹತ್ವವಾದುದು ಎಂದು ವಿವರಿಸಿದರು. ನಂತರ ಮನುಷ್ಯ ಯಾವ ಸಂದರ್ಭದಲ್ಲಿ ಅಜ್ಞಾನಿಯಾಗುತ್ತಾನೆ, ಅದಕ್ಕೆ ಮೂಲಕಾರಣಗಳೇನು ? ಇಂತಹ ಅಜ್ಞಾನದಲ್ಲಿರುವಂತಹ ಸಂದರ್ಭದಲ್ಲಿ ಪ್ರೇರಣೆಯಾದ ವಸ್ತು ಯಾವುದು ? ಪ್ರಶ್ನೆ ಮಾಡುವಂತಹ ಚೈತನ್ಯವಿಲ್ಲದೆ ಇದ್ದ ಜನ ಹೋರಾಟಕ್ಕೆ ಯಾವ ರೀತಿ ಅಣಿಯಾಗುತ್ತಾರೆ, ಈ ಹೋರಾಟದಿಂದ ಅವರಲ್ಲಿ ಸ್ವಾಭಿಮಾನ ಯಾವ ರೀತಿ ಮೂಡಿತು ಎಂಬ ವಿಷಯವನ್ನು ಕೆ. ಎಂ. ಕೊಮ್ಮಣ್ಣನವರು 'ಮಾನವ ಎಚ್ಚೆತ್ತಾಗ' ಎನ್ನುವ ವಿಷಯದ ಕಡೆ ಕಾರ್ಯಕರ್ತರ ಗಮನ ಸೆಳೆದರು.

ಇಂದಿನ ವ್ಯವಸ್ಥೆಯ ವಿರುದ್ಧ ಹೋರಾಡಲು ಹೊರಟಾಗ ದೊಡ್ಡ ಪೆಡಂಭೂತವಾಗಿ ಬೆಳೆದಿರುವ ಅಜ್ಞಾನ, ಅಂಧಕಾರಗಳನ್ನು ಪ್ರೋತ್ಸಾಹಿಸುವ, ಮತ ಮೌಢ್ಯಗಳನ್ನು ಬಹಳ ನಾಜೂಕಾಗಿ ಬೋಧಿಸುವ ಇಂಡಿಯಾದ ಪುರೋಹಿತಶಾಹಿ ಪುಂಡರಿಗೆ ಬಂಡವಾಳವಾಗಿರುವ 'ಜಾತಿ, ಹುಟ್ಟು ಮತ್ತು ಬೆಳವಣಿಗೆ' ಎಂಬ ವಿಷಯವನ್ನು ಎನ್. ವೆಂಕಟೇಶರವರು ಸವಿಸ್ತಾರವಾಗಿ ತಿಳಿಸುತ್ತಾ, ಇಂದಿನ ಯುವ ಪೀಳಿಗೆ ಜಾತಿಮತಗಳನ್ನು ತಿಪ್ಪೆಗೆಸೆದು ಮಾನವ ಜಾತಿ ಒಂದೇ ಎಂದು ಹೇಳಿ ಮನುಷ್ಯತ್ವ ಉಳಿಸಿ ಮನುಷ್ಯರಾಗಿ ಬಾಳ್ವೆ ನಡೆಸಲು ಯುವಕರು ಶ್ರಮವಹಿಸಿ ಕಾರ್ಯಮಗ್ನರಾಗಬೇಕೆಂದು ತಿಳಿಸಿದರು.

ಈ ಜಿಲ್ಲಾ ಕೆಲಸಗಳನ್ನು ನಿರ್ವಹಿಸಬೇಕಾದರೆ ದಲಿತ ಸಂಘಟನೆಯಲ್ಲಿ ಯುವಕರ ಪಾತ್ರ ಏನು ? ಎನ್ನುವ ವಿಷಯವನ್ನು ಕೆ. ನಾರಾಯಣಸ್ವಾಮಿಯವರು ವಿವರಿಸಿದರು. ಹಲವಾರು ದೌರ್ಜನ್ಯಗಳು, ಅತ್ಯಾಚಾರಗಳು, ಕೊಲೆಗಳು, ದರೋಡೆಗಳನ್ನು ಕಾರ್ಯಕರ್ತರ ಮುಂದಿಡುತ್ತಾ ಯುವಕರಲ್ಲಿ ಪ್ರಶ್ನೆಗಳು ಕೇಳುವ ರೀತಿ ಚರ್ಚೆಗೆ ಒಳಪಡಿಸಿದರು. ಇಂತಹ ಸಂದರ್ಭದಲ್ಲಿ ದಲಿತ ಯುವಕರು ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಬೇಕು. ಅವರ ಜವಾಬ್ದಾರಿಗಳು ಏನು ? ಅದರ ಅವಶ್ಯಕತೆ ಏಕೆ ಬೇಕು ? ಎನ್ನುವ ವಿಷಯವನ್ನು ಗಂಗಾರಾಂ ಚಂಡಾಳ್‌ರವರು ಹೇಳಿದರು.

–ಕೆ. ವಿ. ಕೊಮ್ಮಣ್ಣ ಗೌರೀಬಿದನೂರು

ಭಾ. ಜ. ಪ: ಜಾತಿವಾದಿಗಳ ಗುಲಾಮ ಸಂಘಟನೆ

(ಮೊದಲನೆ ಪುಟದಿಂದ)

ದೊರಕಿತು. ಆದರೂ ಯಾವುದೇ ಕೆಲಸವನ್ನು ಕಾಲಕ್ಕೆ ಸರಿಯಾಗಿ ನಿರ್ವಹಿಸದ ಪರಂಪರೆಯನ್ನು ಬೆಳಸಿಕೊಂಡು ಹೋಗುವ ದೇವನೂರ ಮಹಾದೇವ ಅವರ ಹಠಸಮಾನವಾದ ಪ್ರವೃತ್ತಿಗನುಗುಣವಾಗಿ ನಾವು ಹೋಟೆಲನ್ನು ತಡವಾಗಿ ತಲುಪುವ ಹೊತ್ತಿಗೆ ಸುಬ್ಬಯ್ಯ ದೊಡ್ಡ ಹಾಲ್‌ನಲ್ಲಿ ತಮ್ಮ ಅಭಿಮಾನೀ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡತೊಡಗಿದ್ದರು. ಯಾವುದೋ ಸರ್ಕಾರೀ ಆಫೀಸಿನ ಸೆಕ್ಷನ್ ಆಫೀಸರೋ ಅಥವಾ ಸ್ಕೂಲ್ ಇನ್‌ಸ್ಪೆಕ್ಟರರನ್ನು ನೆನಪಿಸುವ, ರಾಜಕಾರಣಿಯ ಯಾವುದೂ ಚಹರೆ ಹೊಂದಿಲ್ಲದ ಸುಬ್ಬಯ್ಯ ಸಿರಿಗನ್ನಡದಲ್ಲಿ ಆರೆಸ್ಸಸ್‌ನ ಧೂರ್ತತನವನ್ನೂ ಹೊಸ ಪ್ರಾದೇಶಿಕ ಪಕ್ಷ ಕಟ್ಟಬೇಕಾಗಿ ಬಂದಿರುವ ಪ್ರಮೇಯವನ್ನು ತಮ್ಮ ಅನುಯಾಯಿಗಳಿಗೆ ವಿವರಿಸುತ್ತಿದ್ದರು.

ಆರೆಸ್ಸಸ್ ಅನ್ನು ಹುಳುಗಳೆಂದು ವರ್ಣಿಸಿದ ಅವರು ಮನುಷ್ಯರಾಗಿ ಬೆಳೆಯಬಲ್ಲವರನ್ನು ತಮ್ಮ ಬೆಳವಣಿಗೆಗೆ ಗೊಬ್ಬರವನ್ನಾಗಿ ಮಾಡಿಕೊಳ್ಳಲು ಈ ಹುಳುಗಳು ಹ್ಯಾಗ್ಯಾಗೆ ಹೊರಳಬಲ್ಲವು, ಜನಸೇವೆ ಎಂದು ಹೇಳಿಕೊಳ್ಳುತ್ತಾ ಆರೆಸ್ಸೆಸ್ಸಿಗರು ಬೆಂಗಳೂರಿನಲ್ಲಿ ಹೇಗೆ ಕೋಟ್ಯಾಂತರ ರೂಪಾಯಿ ಆಸ್ತಿ ಮಾಡಿಕೊಂಡಿದ್ದಾರೆ ; ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿರುವ ಆರೆಸೆಸ್ ನಾಯಕರು ಸುಖಭೋಗಗಳಲ್ಲಿ ತಲ್ಲೀನರಾಗಿ ಈ ಜನ್ಮದಲ್ಲಲ್ಲದಿದ್ದರೂ ಮತ್ತೊಂದೋ, ಮಗದಂದೋ ಜನ್ಮದಲ್ಲಿ ಹಿಂದೂ ರಾಜ್ಯ ಸ್ಥಾಪನೆ ಮಾಡುವ ಎಂತಹ ತ್ರಿ ಕಾ ಲ ಅಜ್ಞಾನಿಗಳಾಗಿದ್ದಾರೆ ; ವ್ಯಕ್ತಿಗಿಂತ ಪಕ್ಷ ಮಹತ್ವದ್ದು ಎಂದು ಉಪದೇಶ ಮಾಡುತ್ತಿರುತ್ತಲೇ ಪಕ್ಷ ಬೆಳೆಸಿದ ತಮ್ಮ ಮೇಲೆ ಹೇಗೆ ವ್ಯಕ್ತಿಗತ ಹಗೆ ಸಾಧಿಸಿದರು ; ಅತ್ತ ದರಿ ಇತ್ತ ಪುಲಿ ಎಂಬಂತಹ ಸನ್ನಿವೇಶ ಸೃಷ್ಟಿ ಮಾಡಿರುವ ಕರ್ನಾಟಕದಲ್ಲಿ ದರೋಡೆಖೋರ ಕಾಂಗ್ರೆ ಮತ್ತು ತಿಳಿಗೇಡಿಗಳ ಕೂಟದಂತಿರುವ ಜನತಾಕ್ಕೆ ಪರ್ಯಾಯವಾಗಿ ಜನಮನದಲ್ಲಿ ಹೊಸಚೇತನ ಉಕ್ಕಿಸಿ ಹಿಂದುಳಿದವರ, ದೀನದಲಿತರ ಅಭ್ಯುದಯವನ್ನು ಸಾಧಿಸುವ ಮೂಲಕ ಹೊಸ ಸಮಾಜ ನಿರ್ಮಿಸುವ ಕನಸು ಹಾಗೂ ಆ ದಿಸೆಯಲ್ಲಿ ಹೋರಾಟ ಮಾಡುವ ಛಲವಿರುವ ಸಂಘಟನೆ ಇವೊತ್ತಿನ ಕರ್ನಾಟಕ ಸಂದರ್ಭದಲ್ಲಿ ಹೇಗೆ ಅನಿವಾರ್ಯವಾಗಿದೆ ಇತ್ಯಾದಿ ಇತ್ಯಾದಿಗಳನ್ನು ಸವಿವರವಾಗಿ ತಮ್ಮ ಅಭಿಮಾನಿಗಳ ಮುಂದಿಟ್ಟರು.

ಸುಬ್ಬಯ್ಯನವರನ್ನು ಅವರ ಬಿ.ಜೆ.ಪಿ ಪದಾಧಿಕಾರದಿಂದಾಗಿ ಗುಮಾನಿಯಿಂದಲೇ ನೋಡುತ್ತಿದ್ದ ನಮಗೆ ಕಳೆದೊಂದು ದಶಕದಲ್ಲಿ, ಅವರು ಯಾವುದೇ ರಾಜಕಾರಣಿ ಪ್ರದರ್ಶಿಸದ ದಿಟ್ಟತನ, ನೇರತೆ, ಸರಳತೆ, ಸ್ವಚ್ಛತೆ ಹಾಗೂ ಅರ್ಪಣಾ ಮನೋಭಾವಗಳು ಅವರ ಬಗ್ಗೆ ನಮ್ಮ ಹೃದಯದ ಯಾವುದೋ ಒಂದು ಮೂಲೆಯಲ್ಲಿ ಪ್ರೀತ್ಯಾಭಿಮಾನಗಳನ್ನೂ ಮೂಡಿಸಿದ್ದವು. ಸುಬ್ಬಯ್ಯನವರ ಪ್ರಸ್ತುತ ಮಾತುಗಳಿಂದ ನಾವು ನಮಗೆ ಗೊತ್ತಿಲ್ಲದೇ ಪುಳಕಿತರಾದದ್ದೂ ಇದರಿಂದಲೇ ಇರಬೇಕು.

ಭಾಷಣದ ನಂತರ ಸುಬ್ಬಯ್ಯ ನಮ್ಮೊಂದಿಗೆ–ನಾನು, ಗೋವಿಂದಯ್ಯ, ದೇವನೂರ ಮಹಾದೇವ ಹಾಗೂ ಜಯರಾಮಯ್ಯ–ಹೋಟೆಲ್‌ನ ಕೊಠಡಿಯೊಂದರಲ್ಲಿ ಪ್ರತ್ಯೇಕವಾಗಿ ಮಾತನಾಡಿದರು. ಗೊತ್ತಿದ್ದೂ ಗೊತ್ತಿದ್ದೂ ಆರ್ ಎಸ್ ಎಸ್ ಕೋಟೆಯನ್ನು ಹೊಕ್ಕ ಸುಬ್ಬಯ್ಯ ಆರೆಸೆಸ್‌ನ ಮನುಷ್ಯವಿರೋಧಿ ಸಂಸ್ಕೃತಿಯ ವಿರುದ್ಧ ಈಗ ಹೂಡಿರುವ ಬಂಡಾಯ ಎಷ್ಟು ಪ್ರಾಮಾಣಿಕವಾದದ್ದು, ಎಂಬುದನ್ನು ಕೆದಕಿ ನೋಡುವುದು ಹಾಗೂ

ಸುಬ್ಬಯ್ಯ–ಪಂಚಮ ಮಾತುಕತೆ

ಬರೀ ಪಾಪಿಷ್ಠ ರಾಜಕಾರಣಿಗಳಿಂದಲೇ ಆಳಿಸಿಕೊಳ್ಳುವ ಕನ್ನಡಿಗರ ಹಣೆಬರಹ ಸುಬ್ಬಯ್ಯನವರಿಂದ ಕೊಂಚವಾದರೂ ಬದಲಾದೀತೆ ಎಂಬುದರ ಹೊಳಹು ಪಡೆದುಕೊಳ್ಳುವುದೇ ನಮ್ಮ ಪ್ರಶ್ನೆಗಳ ಉದ್ದೇಶವಾಗಿತ್ತು. ಭಾ.ಜ.ಪ.ದಲ್ಲಿ ಆರೆಸ್‌ಸ್‌ನ ಪಾತ್ರದ ಅರಿವು ನಿಮಗೆ ಮೊದಲಿರಲಿಲ್ಲವೇ ಎಂಬ ನೇರ ಪ್ರಶ್ನೆಗೆ ಅವರು ಕ್ಷಣವೂ ಯೋಚಿಸದೆ ಕೊಟ್ಟ ಉತ್ತರ: ನನಗೆ ಆರೆಸೆಸ್ ಒಂದು ಪ್ರಶ್ನೆಯೇ ಆಗಿರಲಿಲ್ಲ. ನೀತಿ–ಕಾರ್ಯಕ್ರಮಗಳಿಗನುಗುಣವಾಗಿ ಪಕ್ಷವನ್ನು ಬೆಳೆಸುವುದೊಂದೇ ನನ್ನ ಗುರಿಯಾಗಿತ್ತು. ಭಾ.ಜ.ಪ. ತಾನು ಜಾತ್ಯಾತೀತತೆ ಹಾಗೂ ಸಮಾಜವಾದಕ್ಕೆ ಬದ್ಧವೆಂದು ಘೋಷಿಸಿಕೊಂಡಿದೆ. ಅದಕ್ಕನುಗುಣವಾಗಿ ವಿಶಾಲ ತಳಹದಿಯ ಮೇಲೆ ಪಕ್ಷಕಟ್ಟತೊಡಗಿದೆ. ಇದಕ್ಕೆ ಅಡ್ಡಿ ಉಂಟಾದಾಗಲೇ ನನಗೆ ಆರೆಸೆಸ್ ಒಂದು ಪ್ರಶ್ನೆಯಾದದ್ದು. ಆಗ ನಾನು ಆರೆಸೆಸ್ ವಿರುದ್ಧ ಹೋರಾಡಬೇಕಾಯ್ತು. ಭಾ. ಜ. ಪ. ಬೇರೆ ಆರೆಸೆಸ್ ಬೇರೆ ಎಂಬುದು ಬರೇ ಬೋಗಸ್ ಎಂಬುದು ನನಗೆ ಅರ್ಥವಾಗತೊಡಗಿತು.

ಎರಡು ವರ್ಷಗಳ ಹಿಂದೆ ಇದೇ ಸುಬ್ಬಯ್ಯನವರನ್ನು ಬೇರೊಂದು ಪತ್ರಿಕೆಗೋಸ್ಕರ ನಾನು ಮಾತನಾಡಿಸಿದ್ದಾಗಲವರಿಗೆ ಹೇಳಿದ್ದೆ: ನಿಮ್ಮಂತ
ವರು ಅಂತಹಕಡೆ ಉಳಿಯುವುದು ಕಷ್ಟ ಅಂ
ಸುಬ್ಬಯ್ಯನವರು ಆಗ ಖಾಸಗಿಯಾಗಿ ಮಾತಾಡ
ತ್ತ ಆರೆಸೆಸ್‌ನ ಖೂಳತನ ತನಗೆ ಗೊತ್ತೆಂದ
ಭಾ.ಜ.ಪ.ದಲ್ಲಿ ಅಂತಹವರ ಬೇಳೆ ಬೇಯದಂ
ನೋಡಿಕೊಳ್ಳುವುದಾಗಿ ಹೇಳಿದರು. ಅದನ
ನಾನು ನೆನಪಿಸಿದೊಡನೆ ಅವರು 'ನಿಮ್ಮ ತಿಳುವಳ
ಯೇ ಸರಿಯೆಂದು ಈಗ ಸಾಬೀತಾಗಿದೆ. ನಾನ
ನನ್ನ ಸೋಲನ್ನು ಒಪ್ಪಿಕೊಳ್ಳುವೆ' ಎಂದಷ್ಟೆ
ಹೇಳುವ ಸ್ಥಿತಿಯಲ್ಲಿದ್ದರು.

ಬಹುಶಃ ಸುಬ್ಬಯ್ಯ ಆಗ ಜನಸಂಘದ ಶಿಸ್ತಿ
ಮಾರು ಹೋಗಿದ್ದರು. ಜೊತೆಗೆ ಬರೀ ನಾಯಕರ
ತುಂಬಿರುವ ಬೇರೆ ಪಕ್ಷಗಳಲ್ಲಿ ಅವರು ಹಿ
ಹಿರಿಯ ನಾಯಕರಾಗಿ ಬೆಳೆಯುವ ಅವಕಾಶವಿ
ಲ್ಲಿಲ್ಲ. ಸಮರ್ಥ ನಾಯಕತ್ವವಿಲ್ಲದೆ ನೆಲೆಕಟ್ಟಿದ
ಜನಸಂಘಕ್ಕೂ ಅವರು ಬೇಕಿತ್ತು.

ಸುಬ್ಬಯ್ಯನವರ ಆರೆಸೆಸ್ ವಿರೋಧಿ ಧೋ
ಣೆಯ ಹಿಂದಿರುವ ವಿಚಾರ ಸ್ಪಷ್ಟತೆಯನ್ನು ಖಚಿ
ಪಡಿಸಿಕೊಳ್ಳಲು ನಾವು ಒಂದು ನೇರ ಪ್ರಶ್ನೆ ಹಾ
ದೆವು; ಆರ್.ಎಸ್.ಎಸ್. ಅನ್ನು ನೀವು ವಿರೋ
ಸುವಿರಾದರೂ ಯಾಕೆ ?

ಸುಬ್ಬಯ್ಯ : ನೋಡಿ ಆರೆಸೆಸ್ ಬಗ್ಗೆ, ಅದ
ಸಂಪರ್ಕವಿರುವ ಜನಗಳಿಗಿಂತ ನೇರ ಸಂಪರ್ಕವಿರ
ವರ ಅಭಿಮಾನವೇ ಹೆಚ್ಚು. ದೊಣ್ಣೆ ಬೀ
ಕೊಂಡು ಪಥ ಸಂಚಲನೆ ಮಾಡುವ ಅವರ ಗಣ
ವೇಷಧಾರಿಗಳ ಶಿಸ್ತಿನಿಂದಲೇ ಜನ ಮರುಳಾಗ
ತ್ತಾರೆ. ಆದರೆ ಈ ಸಂಸ್ಥೆಯ ಒಳಗೇನಿದೆ ಎಂಬ
ದನ್ನು ಅದರ ಒಳಗನ್ನು ಕಂಡವರಿಗೇ ಗೊತ್ತು
ಎಲ್ಲರಿಗೆ ತಿಳಿದಿರುವಂತೆ ಇದೊಂದು ಮೊದಲಿಂ
ಲೂ ಜನತೆಯ ವಿರುದ್ಧ ಕೆಲಸ ಮಾಡಿಕೊಂಡ
ಬರುತ್ತಿರುವ ಸಂಸ್ಕೃತಿ. ಹಿಂದೂಧರ್ಮದ ಎ
ಲಾಭಗಳೂ ಕೆಲವರಿಗೇ ಮೀಸಲು ಎಂದು ನಂಬಿರ
ವವರು ಇವರು, ಮಿಕ್ಕವರು ಹಿಂದೂಧರ್ಮದ
ಗುಲಾಮರು. ಜಾತಿ, ಮೇಲು ಕೀಳುಗಳಲ್ಲಿ ನಂಬಿಕ
ಇಟ್ಟ ಆರೆಸೆಸ್‌ನ ಗುಲಾಮ ಸಂಘಟನೆಯಾಗ
ಬಯಸುವ ಭಾ.ಜ.ಪ ವನ್ನು ವಿಶಾಲ ತಳಹದಿಯ
ಮೇಲೆ ಕಟ್ಟುವುದಾದರೂ ಹೇಗೆ? ಆದರೂ ನನ್ನ
ಪ್ರಯತ್ನ ಮಾಡಿದಾಗ ಸಹಜವಾ ನಾನು ಅಸಹನೆಗ
ಒಳಗಾಗಿ ಹೊರ ಹಾಕಲ್ಪಟ್ಟೆ.

ನಾವು : ನಿಮ್ಮ ಹಾಗೂ ಆರೆಸೆಸ್ ನಡುವ
ಘರ್ಷಣೆ ಹೇಗೆ ಆರಂಭವಾಯಿತು?

ಸುಬ್ಬಯ್ಯ : ಘರ್ಷಣೆ ಇದ್ದೇ ಇತ್ತು. ಭಾ.ಜ
ಪ. ಬಹಳ ಶಿಸ್ತಿನ ಪಕ್ಷವೆಂದು ಹೇಳುತ್ತಾರೆ. ಅ

ನೆರೆ ಸಂತ್ರಸ್ತರಿಗೆ ಕಾದುಕೂತ ಚಡ್ಡಿಗಳು !

ಈ ಸರ್ತಿ ಮುಂಗಾರು ವಿಫಲವಾಗಿರುವುದು ರೈತರಿಗೆ ಮತ್ತು ಸರ್ಕಾರಕ್ಕಿಂತ ಹೆಚ್ಚಾಗಿ ಆರೆಸ್ಸೆಸ್ಸಿಗರಿಗೆ ಚಿಂತೆಯಾಗಿದೆ. ...ದೀ ದಂಡೆಯ ಪ್ರದೇಶದ ಆರೆಸೆಸ್‌ಗಳು ನದೀ ನೀರನ್ನೇ ಆಸೆಗಣ್ಣಿನಿಂದ ನೋಡುತ್ತಾ ಕೂತಿದ್ದಾರೆ. ಎಂದು ...ಪ್ರವಾಹ ಬಂದೀತೋ ; ಎಂದು ನದಿ ದಂಡೆಗೂ ಬಡಬಗ್ಗರ ಗುಡಿಸಲುಗಳು ಕೊಚ್ಚಿಕೊಂಡು ಹೋದಾವೋ ; ಎಂದು ...ಡಬಗ್ಗರು ಹಾಳು ದೇವಾಲಯಗಳನ್ನೋ ಅಥವಾ ಪಾಳು ಶಾಲೆಗಳನ್ನೋ ಹೊಕ್ಕಾರೋ ಎಂಬ ತವಕದಿಂದ ನೆರೆ ...ಂತ್ರಸ್ತ ಪರಿಹಾರ ನಿಧಿಯ ರಸೀತಿ ಬುಕ್ಕುಗಳನ್ನು ಚಡ್ಡಿ ಜೇಬುಗಳಲ್ಲಿ ಇಳುಕಿಕೊಂಡು ಕಾಯುತ್ತಾ ಕೂತಿದ್ದಾರೆ. ...ೀಗೆಂದು ಹೇಳಿದವರು ಆರೆಸ್ಸೆಸ್ಸಿನ ಒಳಹೊರಗನ್ನು ಚೆನ್ನಾಗಿ ಬಲ್ಲ ಎ. ಕೆ. ಸುಬ್ಬಯ್ಯನವರು. ಮುಂಗಾರು ಆರಂಭ ...ಾಗುವುದಕ್ಕೆ ಮುನ್ನವೇ "ಕಲೆಕ್ಷನ್" ಗಾಗಿ ರಸೀತಿ ಬುಕ್ಕುಗಳನ್ನು ಪ್ರಿಂಟ್ ಮಾಡಿಸಿ ರೆಡಿ ಮಾಡಿಕೊಂಡು ಕೂರುವ ...ಈ ಸಮಾಜಸೇವಕರು ಕೆಲವು ಹಾರುವ ಪತ್ರಿಕೆಗಳಲ್ಲಿ ಸಮಾಜಸೇವೆಯ ಫೋಸ್ ಕೊಟ್ಟುಕೊಂಡು ಗುಳುಂ ಮಾಡುವ ...ರ್ವಜನಿಕ ಹಣ ಲಕ್ಷಾಂತರ ರೂಪಾಯಿಗಳು.

...ನ್ನು ಪಾಲಿಸಬೇಕೆಂದು ನಾನು ಕೇಳಿದೆ. ಜಾತ್ಯಾ...ತತೆ ಹಾಗೂ ಸಮಾಜವಾದ ಭಾ.ಜ.ಪ.ದ ನೀತಿ ...ೋಷಣೆ. ಇದರ ವಿರುದ್ಧ ಕೆಲಸ ಮಾಡುವವರು ...ನ ಕ್ರಮಕ್ಕೆ ಒಳಗಾಗಬೇಕಾಗುತ್ತದೆಂಬುದು ...ಕ್ಷ ಧೋರಣೆ. ಆರೆಸೆಸ್‌ಗೂ ತಾವು ಜನಕ್ಕೆ ...ಟ್ಟಿರುವ ಈ ನೀತಿ ಘೋಷಣೆಯನ್ನು ಪಾಲಿಸುವ ...ನುತ್ತು ಕಾಣಲಿಲ್ಲ. ಅದಕ್ಕೆ ಘರ್ಷಣೆ.

ಈ ಬಗ್ಗೆ ಇನ್ನಷ್ಟು ವಿವರವಾದ ಉತ್ತರ ...ೊರಡಿಸಲು ನಾವು, ಈ ಹಿಂದೆ ಬಹಳ ಕುತೂಹಲ ...ಳಿಸಿದ್ದ ಭಾ.ಜ.ಪ ನೇತೃತ್ವದ ಹರಿಜನ ಗಿರಿಜನ ...ಮ್ಮೇಳನದ ಪ್ರಸ್ತಾಪ ಮಾಡಿದೆವು.

...ಕೊಂಡಿ ಸಿಕ್ಕಂತೆ ಸುಬ್ಬಯ್ಯ ಸುರಳೀತರಾದರು : ...ದು ಒಂದು ಪಕ್ಷ ಸಮರ್ಥವಾಗಿ ಬೆಳೀಬೇಕಾದರೆ ...ಲ್ಲ ಜನರ ಬೆಂಬಲ ಸೌಹಾರ್ದ ಬೇಕೂಂತ ನಾವು ... ಸಮ್ಮೇಳನ ವ್ಯವಸ್ಥೆಗೊಳಿಸಿದೆವು. ಆದರೆ ...ಾ.ಜ.ಪ.ದ ಜಾತಿವಾದಿಗಳು ಈ ಸಮ್ಮೇಳನ ...ನ್ನು ವಿಫಲಗೊಳಿಸಲು ತಮ್ಮೆಲ್ಲ ಪ್ರಯತ್ನಗಳ ... ಮಾಡಿದರು.

... ನಾವು ಮಧ್ಯೆ ಬಾಯಿಹಾಕಿದೆವು: ಯಾರಾವರು? ...ವರ ವಾದ ಏನು ?

...ಬ್ಬಯ್ಯ : ಭಾವೂರಾವ್ ದೇಶಪಾಂಡೆ, ಮಲ್ಲಿ...ರ್ಜುನಯ್ಯ, ಶಂಕರಮೂರ್ತಿ, ಸಂಜೀವಶೆಟ್ಟಿ ...ತ್ಯಾದಿ. ಹರಿಜನ ಗಿರಿಜನರು ಹೆಂಡಕುಡಿದು ...ದಿರಾಗಾಂಧಿಗೆ ಓಟು ಹಾಕೋದು. ಅವರಿಗ್ಯಾಕೆ ...ಮ್ಮೇಳನ? ಖರ್ಚು? ಇದು ಅವರ ವಾದ.

... ನಾವು ಈ ವಾದವನ್ನು ಕೇಳಿ ತಲೆದೂಗಿದೆವು. ... ವಾದ ಭಾ. ಜ. ಪ. ದಲ್ಲಿ ಚಿರಾಯುವಾಗಲಿ ...ದು ಹಾರೈಸುತ್ತಾ ಸುಬ್ಬಯ್ಯನವರ ಇತ್ತೀಚಿನ ...ು ಪ್ರಸಿದ್ಧ ಹೇಳಿಕೆಯಾದ ಆರೆಸ್ಸೆಸ್‌ಗೂ ...ದಿರಾಗಾಂಧಿಗೂ ಸಂಬಂಧವಿದೆ ಎಂಬುದನ್ನು ...ಸ್ತಾಪಿಸಿದೆವು.

ಸುಬ್ಬಯ್ಯನವರಲ್ಲಿ ಈ ಬಗ್ಗೆ ಖಚಿತ ಸಾಕ್ಷ್ಯವೇನಿಲ್ಲದಿದ್ದರೂ, ಇದಕ್ಕಿಂತ ಸಾಕ್ಷಿ ಇನ್ನೇನುಬೇಕು ಎಂಬಂತೆ ಸೋಮವಾರ ಪೇಟೆಯಲ್ಲಿ ಆರೆಸ್ಸೆಸ್ಸಿಗರು ಗುಂಡೂರಾವ್ ಪರವಾಗಿ ಕೆಲಸ ಮಾಡಿದ್ದನ್ನು, ದೆಹಲಿ ಸ್ಥಳೀನು ಚುನಾವಣೆಗಳಲ್ಲಿ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಕಾಂಗ್ರೆಸೊಡನೆ ಶಾಮೀಲಾಗಿ ಭಾ. ಜ. ಪ. ಕ್ಕೆ ಮಣ್ಣುಮುಕ್ಕಿಸಿದ್ದನ್ನು ಸೂಚಿಸಿದರು. ಅವರು ಅವಮಾನಕ್ಕೆ ಅವಕಾಶವಿಲ್ಲದಂತೆ ನುಡಿದರು: "ಆರೆಸ್ಸೆಸ್‌ಗೆ ಹಿಂದೂ ರಾಜ್ಯ ಅಂದರೆ ಹಿಂದೂ ಧರ್ಮದ ಲಾಭ ಪಡೆದುಕೊಳ್ಳುವ ಕೆಲವೇ ಕೆಲವರ ರಾಜ್ಯ ಬರುವವರೆಗೆ ಇಂದಿರಾಗಾಂಧಿಯೇ ಇರಬೇಕು. ಅವರ ಪ್ರಕಾರ ಇಂದಿರಾಗಾಂಧಿ ವಾಜಪೇಯಿಗಿಂತ ಒಳ್ಳೆಯ ಹಿಂದೂ. ಯಾಕೆಂದರೆ ಇಂದಿರಾಗಾಂಧಿ ಕಂಡ ಕಂಡ ದೇವಸ್ಥಾನಗಳಿಗೆಲ್ಲಾ ನುಗ್ಗುತ್ತಾರಲ್ಲಾ !"

ಹೆಂಗರುಳಿನ ದೇವನೂರ ಮಹಾದೇವ ಬಹು ಪ್ರೀತಿಯಿಂದ ಕೇಳಿದನು : ನೀವು ಕಟ್ಟಿದ ಪಕ್ಷದಿಂದ ನಿಮ್ಮನ್ನೇ ಹೊರಹಾಕಿದ್ದಕ್ಕೆ ನಿಮಗೆ ನೋವಾಗಿಲ್ಲವಾ ?

ಸುಬ್ಬಯ್ಯ ಒಳಗಿನದೆಲ್ಲವನ್ನೂ ಹತ್ತಿಕ್ಕಿದಂತೆ ನಮ್ಮ ಯಾರ ಕಡೆಯೂ ನೋಡದೆ ಉಸುರಿದರು : ನನಗೆ ನೋವೇನೂ ಆಗಿಲ್ಲ.

ನಾವು ಸ್ವಲ್ಪ ವಿಚಲಿತರಾದಂತೆ ಕಂಡದನ್ನು ಗಮನಿಸಿ ಸೇರಿಸಿದರು : ನನಗೇಕೆ ನೋವಾಗಬೇಕು ? ನಾನು ಪಟ್ಟ ಶ್ರಮ ಹಾಳಾಗಿಲ್ಲ. ನನ್ನಿಂದ ಯಾರ್‍ಯಾರು ಪಕ್ಷ ಸೇರಿದರೋ ಅವರೆಲ್ಲಾ ನನ್ನ ಹಿಂದೆ ಬರುವವರೆ.

ಸುಬ್ಬಯ್ಯನವರ ಆಶಾವಾದದ ಬಗ್ಗೆ ಬೆರಗನ್ನೇನೂ ವ್ಯಕ್ತಪಡಿಸದೆ ನಾವು ಅವರು ಕಟ್ಟಬೇಕೆಂದಿರುವ ಹೊಸ ಪ್ರಾದೇಶಿಕ ಪಕ್ಷದ ಬಗ್ಗೆ ವಿಚಾರಿಸಿದೆವು.

ಅರಸು ಮೈನಸ್ ಭ್ರಷ್ಟಾಚಾರ ಹಾಗೂ ಶಾಂತವೇರಿ ಗೋಪಾಲಗೌಡರ ಆದರ್ಶಗಳ ಆಧಾರದ ಮೇಲೆ ಪಕ್ಷ ಕಟ್ಟುವ ಆಶಯ ಅವರದ್ದು. ಭ್ರಷ್ಟಾಚಾರವಿಲ್ಲದೆ ಈ ವ್ಯವಸ್ಥೆಯಲ್ಲಿ ಏನೂ ಮಾಡಲಾಗದು ಎಂದು ಅರಸು ನಂಬಿದ್ದರು. ಆದರೆ ಭ್ರಷ್ಟಾಚಾರವಿಲ್ಲದೆ ಏನೆಲ್ಲ ಮಾಡಬಹುದು ಎಂಬುದನ್ನು ತೋರಿಸಿಕೊಡುವ ಮಹತ್ವಾಕಾಂಕ್ಷೆ ಸುಬ್ಬಯ್ಯನವರದ್ದು. ಇನ್ನು ಗೋಪಾಲಗೌಡರಲ್ಲಿ ಅವರು ಕಂಡಿರುವುದು, ಗ್ರಾಮಾಂತರ ದೃಷ್ಟಿ.

ಈ ಸರಳೀಕೃತ ಮಾತುಗಳ ಹಿಂದಿನ ಆಳಲನ್ನು ಅರಗಿಸಿಕೊಂಡ ನಾವು ನಮ್ಮ ಕೊನೆಯ ಪ್ರಶ್ನೆ ಎಸೆದೆವು: ನಿಮ್ಮ ಹೊಸ ಪಕ್ಷ ಭಾ. ಜ. ಪ. ಮೈನಸ್ ಆರೆಸೆಸ್ ಆಗಿರುತ್ತೊ ?

ಸುಬ್ಬಯ್ಯ ಎಲ್ಲವನ್ನೂ ತೀರ್ಮಾನಿಸಿಕೊಂಡಿರುವಂತೆ ಸ್ಪಷ್ಟವಾಗಿ ಹೇಳಿದರು : ಇಲ್ಲ, ಖಂಡಿತ ನಾವು ಭಾ. ಜ. ಪ. ದ ಪ್ರಣಾಳಿಕೆಯಿಂದ ಭಿನ್ನವಾಗಬಯಸುತ್ತೇವೆ. ನಮ್ಮದು ಸಮಾಜವಾದಿ ತುಡಿತ.

ಕೊನೆಯ ಮಾತುಗಳು ನಮಗೆ ಸುಬ್ಬಯ್ಯ ಎಲ್ಲಿಂದ ಎಲ್ಲಿಗೆ ಸಾಗಿಬಂದಿದ್ದಾರೆ ಎಂಬ ಆಶ್ಚರ್ಯದ ಬೆನ್ನಿಗೇ ಇದೇನು ಅನುಭವದಿಂದ ಪ್ರಾಮಾಣಿಕವಾಗಿ ಹೊರಬಂದ ಮಾತುಗಳು ಅಥವಾ ಎಲ್ಲ ಪರದೇಸಿಗಳೂ ಹಾಡುವ ಹಾಡೋ ಎಂಬ ಗುಮಾನಿ ಮೂಡಿತು.

ಆದರೆ ಈ ಪರದೇಸಿಯ ಹಿಂದೆ ಒಂದು ದಶಕದ ಹೋರಾಟದ ಚರಿತ್ರೆಯೇ ಇದೆ. ಸುಬ್ಬಯ್ಯ ಯಾರನ್ನೂ, ಏನನ್ನೂ ಲೆಕ್ಕಿಸದೆ ಏಕಾಂಗ ವೀರನಂತೆ ಹೋರಾಡಿ ಇಬ್ಬರು ಭ್ರಷ್ಟ ಮಂತ್ರಿಗಳನ್ನು ಕೆಳಗಿಸಿಳಿದ್ದಾರೆ. ಕರ್ನಾಟಕ ಕಂಡ ಅತ್ಯಂತ ಮೂರ್ಖ ಹಾಗೂ ಭ್ರಷ್ಟ ಮುಖ್ಯಮಂತ್ರಿ ಚಿಂದಿಯೆದ್ದು ಹೋಗುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸುಬ್ಬಯ್ಯನವರ ಹೋರಾಟದ ಜೊತೆಗೆ ಸಮಾಜವಾದದ ಚೇತನವೂ ಸೇರುವುದಾದರೆ ಅದಕ್ಕಿಂತ ದೊಡ್ಡ ಅದೃಷ್ಟ ಕರ್ನಾಟಕಕ್ಕೆ ಮತ್ತೊಂದಿಲ್ಲ. ಆದರೆ ಸುಬ್ಬಯ್ಯ ಎಲ್ಲರಂತೆ ಸಮಾಜವಾದದೊಂದಿಗೆ ಚೆಲ್ಲಾಟವಾಡದೆ ಎಲ್ಲದರೊಂದಿಗೆ ರೋಸಿ ಹೋಗಿರುವ ಜನತೆಗೆ ನೆಮ್ಮದಿ, ಉಲ್ಲಾಸಗಳನ್ನು ದೊರಕಿಸಿಕೊಡಬಲ್ಲ ಸಮಾಜವಾದಕ್ಕೆ ಜನಶಕ್ತಿಯ ಉಸಿರು ತುಂಬಬೇಕಾಗಿದೆ. ಅದು ಬೇಡುವ ಮೊದಲ ಬಲಿದಾನವೆಂದರೆ : ವೈಯ್ಯಕ್ತಿಕ ಅಹಂ. ಈ ದೃಷ್ಟಿಯಿಂದ ಸುಬ್ಬಯ್ಯನವರ ಜವಾಬ್ದಾರಿ ಈಗ ಹೆಚ್ಚಿದೆ. ಇಲ್ಲದೆ ಹೋದಲ್ಲಿ ಈ ಮರ್ಮವನ್ನರಿಯದ ಎಲ್ಲ ಮೂರ್ಖ ನಾಯಕರಂತೆ ಸುಬ್ಬಯ್ಯನವರೂ ಬೀದಿಪಾಲಾಗುತ್ತಾರೆ, ತಮ್ಮ ಅಭಿಮಾನಿಗಳ ಜೊತೆಗೆ.

ನನ್ನ ನೋವಿನ ಸಂಪುಟದಿಂದ – ೩

ಒಂದು ರೀತಿಯಲ್ಲಿ ನಾವು ಈಗಲೂ ಸಹ ಔಪನಿವೇಶಿಕ ಭಾರತದಲ್ಲೇ ಬದುಕುತ್ತಿದ್ದೇವೆ. ಇಲ್ಲಿ ಸರಕಾರಿ ಹುದ್ದೆಗಳಿಗೆ ಮರ್ಯಾದೆ ಇದೆಯೇ ಹೊರತಾಗಿ ಮಿಕ್ಕೆಲ್ಲ ಕೆಲಸ-ನೌಕರಿಗಳು ಕೆಳಮಟ್ಟದಲ್ಲಿಯೇ ಇವೆ; ತಾನು ಮಾಡುತ್ತಿರುವ ಕೆಲಸದ ಬಗೆಗೆ ಯಾರಿಗೂ ಹೆಮ್ಮೆ ಇಲ್ಲ. ಎಲ್ಲರೂ ಒಬ್ಬರಿನ್ನೊಬ್ಬರನ್ನು ಅವನು ಏನು ಮಾಡುತ್ತಿದ್ದಾನೆ ಎಂದು ಇಣುಕು ನೋಟ ಬೀರುವುದರಲ್ಲೇ ತಲ್ಲೀನರಾಗಿದ್ದಾರೆ...........

(ಕಳೆದ ಸಂಚಿಕೆಯಿಂದ)

ಕಾಲೇಜಿನ ಅಧ್ಯಾಪಕ ವೃತ್ತಿಯ ಜೊತೆಜೊತೆಗೆ ನಾನು ವ್ಯಾಪಾರವನ್ನೂ ಮಾಡಲಾರಂಭಿಸಿದ್ದೆ. ಈ ವ್ಯಾಪಾರ ಪ್ರಮುಖವಾಗಿ ಜವಳಿಗೆ ಸಂಬಂಧಿಸಿದ್ದಾಗಿತ್ತು. ನನ್ನ ತಂದೆಯ ಬಳಿ ವಿಭಿನ್ನ ಕಾರ್ಖಾನೆಗಳ ಏಜೆನ್ಸಿಗಳಿದ್ದವು. ನಾವು ಜವಳಿ ವ್ಯಾಪಾರಿಗಳಿಂದ ಆರ್ಡರ್‌ಗಳನ್ನು ಪಡೆದು ಕಾರ್ಖಾನೆಗಳಿಗೆ ಕಳಿಸುತ್ತಿದ್ದೆವು. ಮಾಲು ಬಂದಾಗ ನಮಗೆ ಕಮಿಷನ್ ಸಿಗುತ್ತಿತ್ತು. ನೇರವಾದಂಥ ವ್ಯವಹಾರ ನನಗಿಂತಲೂ ಮುಂಚೆ ನನ್ನ ಅಣ್ಣ ಎರಡು ಮೂರು ವರ್ಷದವರೆಗೆ ಈ ವ್ಯಾಪಾರವನ್ನು ನಡೆಸಿದ್ದರು. ನಾನು ಈ ವ್ಯಾಪಾರದಲ್ಲಿ ಕೈ ಹಾಕಿದ ಮೇಲೆ ಅಣ್ಣ ಶಾಂತಿನಿಕೇತನಕ್ಕೆ ಹೋದರು. ಆದರೆ, ನನ್ನ ಪಾಲಿಗಂತೂ ಈ ವ್ಯಾಪಾರದ ಅನುಭವ ತುಂಬ ಅಪೂರ್ವ[illegible]ಕ್ಲಿಷ್ಟವಾದಂಥಾದ್ದಾಗಿಯೂ ಕಂಡಿತು.

ಎಂ. ಎ. ಪಾಸುಮಾಡಿದವನಿಗೆ ಏಜೆನ್ಸಿ ಕೆಲಸದ ಕಷ್ಟ ಕೋಟಲೆಗಳು ಎಷ್ಟು ಎಂಬುದು ಅದನ್ನು ಅನುಭವಿಸಿದವನಿಗೆ ಮಾತ್ರಗೊತ್ತಾಗುತ್ತದೆ. ಇಂಗ್ಲಿಷ್‌ನ ಬದುಕಿನ ತೀವ್ರ ವಾತಾವರಣವಿದ್ದಂಥ ಕಾಲೇಜಿನಲ್ಲಿ ನಾನು ಓದಿ ಬಂದಿದ್ದೆ. ಬಹಳಷ್ಟು ವಿದ್ಯಾರ್ಥಿಗಳು ಸರ್ಕಾರಿ ಅಧಿಕಾರಿಗಳಾಗುವ ಕನಸು ಕಾಣುತ್ತಿದ್ದರು. ವ್ಯಾಪಾರದಂಥ ವಹಿವಾಟಿಗೆ ಈ ಬಗೆಯ ಶಿಕ್ಷಣ ತೀರಾ ಆತಂಕಕಾರಿಯಾದದ್ದು ಎಂಬ ಅಂಶ ನನ್ನನ್ನು ಗಾಢವಾಗಿ ಕಾಡದಿದ್ದರೂ ನನ್ನ ಸುಪ್ತ ಮನಸ್ಸಿನಲ್ಲಂತೂ ಅವಶ್ಯ ಇತ್ತು. ನಾನು ತುಂಬಾ ಉತ್ಸಾಹದಿಂದ ಕೆಲಸವನ್ನೇನೋ ಆರಂಭಿಸಿದ್ದೆ. ಆದರೆ ಮನಸ್ಸಿನ ತುಂಬೆಲ್ಲ ಸಾಹಿತ್ಯವಷ್ಟೇ ಅಲ್ಲದೆ ಗಾಂಧೀವಾದಿ ವಿಚಾರಗಳು ತುಂಬಿಕೊಂಡಿದ್ದವು. ನಾನು ಮಾದರಿ ಬಟ್ಟೆಗಳ ಬಾಕ್ಸನ್ನು ತೆಗೆದುಕೊಂಡು ಯಾವುದಾದರೊಂದು ಅಂಗಡಿಯ ಬಳಿ ಹೋದರೆ ಆ ಅಂಗಡಿಯವ ತನ್ನ ಗಿರಾಕಿಗಳ ಜೊತೆ ಎಷ್ಟು ತನ್ಮಯನಾಗಿರುತ್ತಿದ್ದನೆಂದರೆ ಕಣ್ಣೆತ್ತಿಯೂ ಸಹ ನನ್ನತ್ತ ನೋಡುತ್ತಿರಲಿಲ್ಲ. ಒಂದು ವೇಳೆ ಯಾವ ಗಿರಾಕಿಯೂ ಇಲ್ಲದಿದ್ದಲ್ಲಿ ಮಾತ್ರ ನಮಸ್ಕಾರ–ಕುಶಲ ಕ್ಷೇಮದನಂತರ ಮಾತುಕತೆಗಳಾಗುತ್ತಿದ್ದವು. ಒಮ್ಮೊಮ್ಮೆ ಸೋಡಾ ತರಿಸಿ ಕೊಡುತ್ತಿದ್ದ. ಸರಿ, ಇದಾದ ನಂತರ ಅವನು ನನ್ನ ಅಸ್ತಿತ್ವವನ್ನೇ ಮರೆತು ಬಿಡುತ್ತಿದ್ದ. ಒಮ್ಮೆ ತನ್ನ ಲೆಕ್ಕದ ಪುಸ್ತಕಗಳನ್ನು ತೆರೆದು ಕೂತರೆ ಇನ್ನೊಮ್ಮೆ ಮಧ್ಯಾಹ್ನದ ಹೊತ್ತಾಗಿದ್ದರೆ ಆರಾಮವಾಗಿ ಕಾಲು ಚಾಚಿ ಮಲಗಿ ಬಿಡುತ್ತಿದ್ದ ಕೂಡ. ನಂತರ ಎರಡು ಮೂರು ಗಂಟೆಯ ನಂತರ ಎದ್ದು ಬೇಕು ಬೇಡದವನಂತೆ ಮಾದರಿ ಬಟ್ಟೆಗಳ ಬಾಕ್ಸ್ ಬಿಚ್ಚುವಂತೆ ಹೇಳುತ್ತಿದ್ದ. ಒಮ್ಮೊಮ್ಮೆ ಆರ್ಡರ್ ಸಿಗುತ್ತಿತ್ತು, ಒಮ್ಮೊಮ್ಮೆ ಸಿಗುತ್ತಿರಲಿಲ್ಲ. ಇಡೀ ಬಜಾರಿನಲ್ಲಿ ಇದೇ ವಾತಾವರಣವಿತ್ತು. ದಿನಗಳುರುಳುತ್ತಿದ್ದಂತೆ ನಾನು ಈ ವ್ಯಾಪಾರದ ಬಗೆಗೆ ಖಿನ್ನನಾಗತೊಡಗಿದೆ

ಎಲ್ಲಕ್ಕಿಂತ ವಿಚಿತ್ರವಾದ ಅನುಭವ ನನಗಾದದ್ದು ಲಾಹೋರಿನಲ್ಲಿ. ಅದರಿಂದಾಗಿ ನನಗೆ ತುಂಬಾ ಬೇಸರವಾಯಿತು. ಈಗ ಅನ್ನಿಸುತ್ತೆ— ಮಾದರಿ ಪೀಸ್‌ಗಳ ಬಾಕ್ಸ್‌ನ್ನು ಲಾಹೋರಿಗೆ ತೆಗೆದುಕೊಂಡು ಹೋದದ್ದೇ ತಪ್ಪಾಯಿತು ಅಂತ. ಲಾಹೋರಿನಲ್ಲಿ ನಾನು ನನ್ನ ಬಾಲ್ಯದ ದಿನಗಳನ್ನು ಕಳೆದಿದ್ದೆ. ನನ್ನ ಗೆಳೆಯರ ಜೊತೆ ಶೆಲ್ಲಿ, ಕೀಟ್ಸ್ ಕುರಿತು ಚರ್ಚಿಸುತ್ತ ಸುತ್ತುತ್ತಿದ್ದ, ನಾಟಕಗಳಲ್ಲಿ, ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಲು ಓಡಾಡುತ್ತಿದ್ದ ಆ ಮಾಲ್ ರೋಡ್‌ನಲ್ಲಿಯೇ ಇಂದು ಕೂಲಿಯ ತಲೆಯ ಮೇಲೆ ಮಾದರಿ ಪೀಸ್‌ಗಳ ಬಾಕ್ಸ್‌ನ್ನು ಹೊರಿಸಿಕೊಂಡು ಅಂಗಡಿ ಅಂಗಡಿಗೂ ಆರ್ಡರ್ ತೆಗೆದುಕೊಳ್ಳಲು ಹೋಗುತ್ತಿದ್ದೆ. ಎಲ್ಲಿಂದೆಲ್ಲಿಗೆ, ಎಂಥ ತೀವ್ರ ಪರಿವರ್ತನೆ! ಹಾಗೆ ನೋಡಿದರೆ ನಮ್ಮ ಸಾಮಾಜಿಕ ವಾತಾವರಣ ಇನ್ನೂ ಬದಲಾಗಿಲ್ಲ; ಒಂದು ರೀತಿಯಲ್ಲಿ ನಾವು ಈಗಲೂ ಸಹ ಔಪನಿವೇಶಿಕ ಭಾರತದಲ್ಲೇ ಬದುಕುತ್ತಿದ್ದೇವೆ, ಇಲ್ಲಿ ಸರಕಾರಿ ಹುದ್ದೆಗಳಿಗೆ ಮರ್ಯಾದೆ ಇದೆಯೇ ಹೊರತಾಗಿ ಮಿಕ್ಕೆಲ್ಲ ಕೆಲಸ–ನೌಕರಿಗಳು ಕೆಳಮಟ್ಟದಲ್ಲಿಯೇ ಇವೆ, ತಾನು ಮಾಡುತ್ತಿರುವ ಕೆಲಸದ ಬಗೆಗೆ ಯಾರಿಗೂ ಹೆಮ್ಮೆ ಇಲ್ಲ. ಎಲ್ಲರೂ ಒಬ್ಬರಿನ್ನೊಬ್ಬರನ್ನು ಅವನು ಏನು ಮಾಡುತ್ತಿದ್ದಾನೆ ಎಂದು ಇಣುಕುನೋಟ ಬೀರುವುದರಲ್ಲೇ ತಲ್ಲೀನನಾಗಿದ್ದಾನೆ. ಆದರೆ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಮಾಡಿದ ನಂತರ ಏಜೆನ್ಸಿಯ ಕೆಲಸ ನಿರ್ವಹಿಸುವುದು ನಿಜಕ್ಕೂ ಕಷ್ಟದ ಕೆಲಸವಾಗಿತ್ತು, ನಿಜ ಹೇಳಬೇಕೆಂದರೆ ಯಾವುದೋ ಒಂದು ಮಟ್ಟದಲ್ಲಿ ನನ್ನ ಸಹನಶಕ್ತಿ ಮುಗಿದುಹೋಗಿತ್ತು.

ಮಾಲ್‌ರೋಡ್‌ನಲ್ಲಿ ಸಿಂಧಿಗಳ ಒಂದು ದೊಡ್ಡ ಅಂಗಡಿ ಇತ್ತು. ನಾನು ಪತ್ರಮುಖೇನ ಅವರ ಜೊತೆ ಸಮಯ ನಿಗದಿಗೊಳಿಸಿ ಆ ಸಮಯಕ್ಕೆ 10 ಗಂಟೆಗೆ ಸರಿಯಾಗಿ ಮಾದರಿಗಳನ್ನು ತೆಗೆದುಕೊಂಡು ಅವರಲ್ಲಿಗೆ ಹೋದೆ; ನಾನು ಅಂಗಡಿಯ ವೈಭವ-ಸಜ್ಜನ್ನೂ ನೋಡಿ ಇಂಗ್ಲೀಷ್‌ನಲ್ಲಿ ಮಾತನಾಡಲಾರಂಭಿಸಿದೆ. ಸೇಠ್ ಹೇಳಿದ– 'ಬಾಕ್ಸ್ ಇಡಿ ಇಲ್ಲಿ, ಹನ್ನೆರಡುಗಂಟೆಗೆ ನಾವು ನೋಡ್ತೇವೆ ಅವನ್ನು.' ನನಗೆ ಈ ಬಗೆಯ ಉತ್ತರಗಳು ಹೊಸದೇನೂ ಆಗಿರಲಿಲ್ಲ. ಸರಿ, ನಾನು ಬಾಕ್ಸ್‌ನ್ನು ಇಟ್ಟು ಆ ಊರಿನ ರಸ್ತೆಗಳನ್ನು ಅಳೆಯಲು ಹೊರಗೆ ಹಂದೆ. ಹನ್ನೆರಡು ಗಂಟೆಗೆ ಹಿಂತಿರುಗಿ ಬಂದು ನೋಡಿದರೆ ಅಂಗಡಿ ಮಾಲೀಕ ಅಲ್ಲಿರಲಿಲ್ಲ.



ಭೀಷ್ಮ ಸಾಹನಿ

ಕೇಳಿದ್ದಕ್ಕೆ ಗುಮಾಸ್ತ ಹೇಳಿದ–ನಮೂನೆಗಳನ್ನು ನಾವೂ ನೋಡುತ್ತೇವೆ. ಆದರೆ ಆರ್ಡರ್ ಕೊಡುವವರು ಸೇಠ್‌ಮಾತ್ರ. ನೀವು ನಾಲ್ಕು ಗಂಟೆಗೆ ಬನ್ನಿ, ಇನ್ನೇನು ಉಳಿಯಿತು. ಭಾರವಾದ ಮನಸ್ಸಿನಿಂದ ಪುನಃ ಅಂಗಡಿಯಿಂದ ಹೊರಬಂದೆ. ಈ ಸಾರಿ ರಸ್ತೆಗಳನ್ನು ಅಳೆಯುವ ಬದಲು ಕಾಫೀ ಹೌಸ್ ಕಡೆ ಹೊರಟೆ. ಕಾಫೀಹೌಸ್! ನನ್ನ ಜೊತೆಗಾರನೊಂದಿಗೆ ಗಂಟೆಗಟ್ಟಲೆ ಮಾತನಾಡುತ್ತಿದ್ದ ಕಾಫೀಹೌಸ್. ಅಲ್ಲಿಗೆ ಹೋಗಿ ದೊಡ್ಡ ತಪ್ಪು ಮಾಡಿದೆ. ಕಾಫೀಹೌಸ್ ಒಳಗೆ ಹೆಜ್ಜೆ ಇಡುತ್ತಿದ್ದಂತೆಯೇ ನನಗೆ ನಾನು ಪರಕೀಯನೆಂಬ ಭಾವನೆ ಮನಸ್ಸಿಗೆ ಬಂತು. ಅಲ್ಲಿ ಮೊದಲಿದ್ದಂತೆಯೇ ಓಡಾಟ. ಗುಜುಗುಜು ಇತ್ತು, ಒಬ್ಬಿಬ್ಬರು ಹಳೇ ಸ್ನೇಹಿತರೂ ಭೇಟಿಯಾದರು, ಆದರೂ ನನ್ನ ಮನಸ್ಸಿಗೆ ಎಷ್ಟು ಮಂಕು ಕವಿದಿತ್ತೆಂದರೆ ಬಾಯಿಂದ ಮಾತು ಹೊರಡಲಿಲ್ಲ. ಇದ್ದಕ್ಕಿದ್ದಂತೆಯೇ ಆ ಎಲ್ಲವೂ ನನ್ನಿಂದ ಪರಕೀಯವಾದಂಥ ಅನುಭವವಾಯ್ತು. ಗಂಟಲು ತುಂಬಿ ಬಂತು. ಇಷ್ಟೆಲ್ಲ ಸಹಿಸಿಕೊಂಡು ನಾಲ್ಕು ಗಂಟೆಗೆ ಅಂಗಡಿಗೆ ಬಂದರೆ ಸೇಠ್ ಕೋಪಿಸಿ ಕೊಂಡು ಹೇಳಿದ– 'ನೋಡ್ತೇವೆ ನೋಡ್ತೇವೆ. ನೀನಂತೂ ಬೆನ್ನ ಹಿಂದೆ ಬಿದ್ದಿದ್ದೀಯಾ?', ನನಗೆ ಮೈಯೆಲ್ಲ ಉರಿಯಿತು. ಮನಸ್ಸಿಗೆ ಬಂದದ್ದನ್ನೆಲ್ಲ ಅಂದೆ. ಅದೂ ಇಂಗ್ಲೀಷ್‌ನಲ್ಲಿ. ಆದರೆ ನಾನು ಅಷ್ಟೆಲ್ಲ ಕೂಗಾಡಿದ್ದರ ಪ್ರಭಾವ ಸೇಠ್‌ನ ಮೇಲೆ ಎಷ್ಟರಮಟ್ಟಿಗಾಯಿತೆಂದರೆ ಅವನು ನನ್ನ ಬಾಕ್ಸ್ ಅನ್ನು ಎತ್ತಿಸಿ ಅಂಗಡಿಯಿಂದ ಹೊರಗಿಡಿಸಿದ. ನಾನೂ ಆವೇಶದಲ್ಲಿ ಹೊರಗೆ ಬಂದು ಟಾಂಗಾ ಕರೆದೆ. ಅದೇ ರೀತಿ ಇಂಗ್ಲೀಷ್‌ನಲ್ಲಿ ಬೈಯುತ್ತ, ಟಾಂಗಾದಲ್ಲಿ ಬಾಕ್ಸ್ ಇಟ್ಟುಕೊಂಡು ಅಲ್ಲಿಂದ ಹೊರಬಿದ್ದೆ. ಒಮ್ಮೆ ಹಿಂತಿರುಗಿ ನೋಡಿದರೆ, ಸೇಠ್ ಮತ್ತು ಅವನ ಗುಮಾಸ್ತ ಜಗುಲಿಯ ಮೇಲೆ ನಿಂತು ನಗುತ್ತಿರುವುದು ಕಾಣಿಸಿತು : ಕಮೀಷನ್ ಏಜೆಂಟ್‌ಗಳು ತಮ್ಮ ಬಣ್ಣ ಬದಲಾಯಿಸಿ ಬಿಟ್ಟಿದ್ದಾರೆ!... ಆದರೆ ಸರಿಯಾಗ್ತಾನೆ.. ಈಗ ತಾನೇ ಕಾಲೇಜ್‌ನಲ್ಲಿ ಓದಿ ಬಂದಿದ್ದಾನೆ...., ಅಂದೇ ರಾತ್ರಿ ರೈಲಿನಲ್ಲಿ ನಾನು ಲಾಹೋರನ್ನು ಬಿಟ್ಟೆ.

ನಾನು ವ್ಯಾಪಾರ ಉದ್ಯಮಕ್ಕೆ ಅಯೋಗ್ಯನಾಗುತ್ತಿದ್ದೆ... ದಿನೇ ದಿನೇ ಈ ಉದ್ಯಮ ತನ್ನ ಎದೆಯ ಮೇಲೆ ಕೂತ ಭಾರವಾಗುತ್ತಾ ಹೋಗುತ್ತಿತ್ತು. ಎಂ.ಎ. ಶಿಕ್ಷಣವಷ್ಟೇ ಅಲ್ಲ, ಬಗೆಬಗೆಯ ಮಾನಸಿಕ ಸ್ಥಿತಿಗಳು ನನ್ನ ಹಾದಿಯ ಅಡಚಣೆಗಳಾಗುತ್ತ ಹೋಗುತ್ತಿದ್ದವು. ಅವುಗಳಲ್ಲಿ ನನ್ನ ಆದರ್ಶವಾದವೂ ಒಂದು. ನಾನು ಕಮೀಷನ್ ಏಜೆಂಟ್, ಕಮೀಷನ್‌ನಿಂದಷ್ಟೇ ನಾನು ಸಂತೃಪ್ತನಾಗಿರಬೇಕು ಎಂಬ ವಿಚಾರ ನನ್ನ ತಲೆಗೆ ಎಲ್ಲಿಂದ ಬಂತೋ ಏನೋ. ಗಾಂಧೀವಾದಿ ವಿಚಾರಧಾರೆಯ ಪ್ರಭಾವವೋ ಅಥವಾ ಇನ್ನೇನೋ ಗೊತ್ತಿಲ್ಲ. ಲಾಭಗಳಿಸುವುದು, ನಾನೇ ಮಾಲು ಖರೀದಿಸಿ ಲಾಭಕ್ಕೆ ಮಾರುವುದು ನನಗಿಷ್ಟವಿರಲಿಲ್ಲ. ಇತರೆ ಅಂಗಡಿಯವರು ನನ್ನ ಮೂಲಕ ಮಾಲನ್ನು ಖರೀದಿ ಮಾಡಿ ಲಾಭಕ್ಕೆ ಮಾರುತ್ತಿದ್ದರು. ಆದರೆ ನಾನು ಆರ್ಡರ್‌ಗಳನ್ನು ಮಾತ್ರ ಬುಕ್ ಮಾಡುತ್ತ ಸುತ್ತುತ್ತಿದ್ದೆ. ಹಾಗೆ ನೋಡಿದರೆ ನನ್ನ ತಂದೆಯವರು ಸಹ ಕಮೀಷನ್ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಆದರೆ ಆ ಕಾಲವೇ ಬೇರೆ.

ಎರಡನೇ ವಿಶ್ವಯುದ್ಧ ಆರಂಭವಾಗುತ್ತಿದ್ದಂತೆಯೇ ಪೇಟೆಯ ಧಾರಣೆಗಳು ಹೆಚ್ಚಾಗತೊಡಗಿದವು. ಉದಾಹರಣೆಗೆ ಐದು ಆಣೆಗೆ ಗಜದಂತೆ ಆರ್ಡರ್ ಬುಕ್‌ಮಾಡಿಕೊಂಡು ಬಂದರೆ ಆರ್ಡರ್ ಮಂಜೂರಾಗಿ ಬರುವ ಹೊತ್ತಿಗೆ ಬೆಲೆ ಹೆಚ್ಚಾಗಿ ಆರಾಣೆಯಾಗಿರುತ್ತಿತ್ತು. ಒಂದೊಂದು ಗಂಟಿನಲ್ಲಿ ವ್ಯಾಪಾರಿಗಳು ನೂರಾರು ರೂಪಾಯಿಗಳನ್ನು ಸಂಪಾದಿಸುತ್ತಿದ್ದರು. ವ್ಯಾಪಾರಿಗಳು ನನ್ನೊಂದಿಗೆ ಹೇಳುತ್ತಿದ್ದುದುಂಟು– 'ವ್ಯಾಪಾರದಾರರಿಗೆ ಐವತ್ತು ಗಂಟುಗಳನ್ನು ನೀನು ಬುಕ್‌ಮಾಡ್ತೀಯಾ. ನಿನ್ನ ಸ್ವಂತಕ್ಕೆ ಪತ್ತು ಗಂಟುಗಳನ್ನಾದರೂ ಏಕೆ ಬುಕ್ ಮಾಡಿಕೊಳ್ಳಬಾರದು' ಅಂತ, ಆದರೆ ನಾನು 'ಪ್ರಾಮಾಣಿಕ'ನಾಗಿ ಅಲೆಯುತ್ತಿದ್ದೆ. ಮಾಧ್ಯಮ ಮತ್ತು ಗುರಿಯ ಮಧ್ಯೆ ಹೊಂದಾಣಿಕೆಯ ಲೆಕ್ಕ ಹಾಕುತ್ತ ಕುಳಿತಿದ್ದೆ. ಇರಲಿ. ಆ ದಿನಗಳಲ್ಲೇ ಮತ್ತೊಂದು ಘಟನೆ ನಡೆಯಿತು. ಯುದ್ಧಘೋಷಣೆಯಾಗುತ್ತಿದ್ದಂತೆಯೇ ಹತ್ತಿಯ ಬಟ್ಟೆಯ ಮೇಲೆ ಕಂಟ್ರೋಲ್ ತರಲಾಯಿತು. ಪ್ರತಿ ಊರಿನಲ್ಲೂ ಎರಡೆರಡು–ಮೂರು ಮೂರು ಅಧಿಕೃತ ಮಾರಾಟಗಾರರನ್ನು ನೇಮಿಸಲಾಯಿತು. ಈ ಸಂದರ್ಭದಲ್ಲಿ ದೆಹಲಿಗೆ ಬಂದು ಟೆಕ್ಸ್‌ಟೈಲ್ ಕಂಟ್ರೋಲರ್ ಅವರನ್ನು ಭೇಟಿಯಾಗುವಂತೆ ನಮಗೂ ಪತ್ರ ಬಂತು. ನಾನು ಅದೇ ಪ್ರಕಾರವಾಗಿ ಆ ರಾತ್ರಿಯೇ ರೈಲನ್ನು ಹತ್ತಿ ದೆಹಲಿ ತಲುಪಿದೆ. ಕಂಟ್ರೋಲರ್ ಕುರ್ಚಿಯ ಮೇಲೆ ಒಬ್ಬ ಬಂಗಾಳಿ ಮನುಷ್ಯ ಕುಳಿತಿದ್ದರು. ತುಂಬ ಗೌರವದಿಂದ ಕಂಡರು, 'ನಿಮ್ಮ ಊರಿನಲ್ಲಿ ನಾವು ಮೂವರು ಮಾರಾಟಗಾರರನ್ನು ನೇಮಿಸುತ್ತಿದ್ದೇವೆ. ಅವರಲ್ಲಿ ನೀವೂ ಒಬ್ಬರು. ನಾಳೆ ಬೆಳಗ್ಗೆ ಬಂದು ಕರಾರು ಪತ್ರಗಳಿಗೆ ಸಹಿಹಾಕಿ ಹೋಗಿ' ಅಂದರು. ನನ್ನ ಮನಸ್ಸು ಅರಳಿತು. ಆದರೆ ಅದೇ ಸಂಜೆ ಓರ್ವ ಮನುಷ್ಯ ನನ್ನನ್ನು ಭೇಟಿಯಾಗಲು ನಾನು ಇಳಿದು ಕೊಂಡಿದ್ದ ಹೋಟೆಲ್‌ಗೆ ಬಂದರು. ಇವರು ನನಗೆ ಗುರುತ್ತಿದ್ದವರೇ, ದೂರದ ನೆಂಟರೂ ಕೂಡ. ನನ್ನ ವಿಳಾಸ ಇವರಿಗೆ ಹೇಗೆ ಗೊತ್ತಾಯಿತು ಎಂದು ನನಗೆ ಆಶ್ಚರ್ಯ! ಅಷ್ಟಕ್ಕೂ ನನ್ನನ್ನು ಭೇಟಿಯಾಗಲು ಇವರು ಬಂದರಾದರೂ ಏಕೆ! ಕುಳಿತುಕೊಳ್ಳುತ್ತಿದ್ದಂತೆಯೇ ಹೇಳಿದರು: 'ಆ ಬಂಗಾಳಿ ಮನುಷ್ಯ ಹತ್ತುಸಾವಿರ ಕೇಳುತ್ತಿದ್ದಾನೆ. ಈ ಹಣ ಅಷ್ಟು ದೊಡ್ಡದೇನಲ್ಲ. ನೀನು ತಂತಿಕೊಟ್ಟು ಇಷ್ಟಕ್ಕೆ ವ್ಯವಸ್ಥೆಮಾಡು'

ಆಶ್ಚರ್ಯದಿಂದ ನಾನು ಇವನ ಮುಖ ನೋಡುತ್ತ ಕುಳಿತೆ. ಇಂಥ ಕೆಲಸವನ್ನು ಮಾಡಲು ನಾನು ಖಂಡಿತ ಸಿದ್ಧನಿರಲಿಲ್ಲ. ಅತಿ ಲಾಭಕ್ಕೆಂದೂ ಆಸೆಪಟ್ಟು ಇಷ್ಟು ದಿನಗಳಲ್ಲಿ ನಾನು ಎಂದೂ ಕೆಲಸ ಮಾಡಿರಲಿಲ್ಲ. ಅಂದ ಮೇಲೆ ಈಗ ಲಂಚಕೊಡಲು ನನ್ನ ಮನಸ್ಸು ಬಿಲ್‌ಕುಲ್ ಒಪ್ಪುವುದೇನು? ಅಷ್ಟಕ್ಕೂ ನಮ್ಮ ಹೆಸರು ಲಿಸ್ಟ್‌ನಲ್ಲಿದೆ ಅಂದಮೇಲೆ ಆತ ತಿರಸ್ಕರಿಸುವುದು ಸಂಭವವಾಗುವುದಾದರೂ ಹೇಗೆ? ನಾನು ಲಂಚಕೊಡಲು ತಿರಸ್ಕರಿಸಿದೆ. ಈಗ ಇವನು ಆಶ್ಚರ್ಯದಿಂದ ನನ್ನ ಮುಖ ನಿಟ್ಟಿಸತೊಡಗಿದ.

'ನಿನ್ನ ತಲೆ ಸರಿಯಾಗಿದೆಯೋ ಇಲ್ಲವೋ? ಈ ಮನುಷ್ಯ ಹೇಳಿದ– 'ಆ ಮನುಷ್ಯನ ಕೈಬಿಸಿ ಮಾಡದೇ ಹೋದರೆ ಈ ಏಜನ್ಸಿ ನಿಮಗೆ ಸಿಗುತ್ತೇನು? ಯಾವ ಪ್ರಪಂಚದಲ್ಲಿದ್ದೀರಿ ನೀವು?' ಬಹಳ ಹೊತ್ತಿನವರೆಗೂ ಇವನು ನನ[illegible]ಳಿಕೆ ಹೇಳುತ್ತಲೇ ಇದ್ದರು. ನಾನು ಅವ[illegible]ದು ಮಾತನ್ನೂ ಒಪ್ಪಲಿಲ್ಲ.

ಮಾರನೆಯ ಬೆಳಗ್ಗೆ ಆ ಅಧಿಕಾರಿಯನ್ನು ಭೇಟಿಯಾಗಲು ಹೋದೆ. ಆದರೆ ಆತ ಭೇಟಿಗೆ ಅವಕಾಶವನ್ನೇ ಕೊಡಲಿಲ್ಲ. ಲಂಚ್ ಸಮಯದ ನಂತರ ಮತ್ತೆ ನನ್ನ ಹೆಸರು ಬರೆದ ಚೀಟಿಯನ್ನು ಒಳಗೆ ಕಳಿಸಿದೆ. ಕರೆಸಿಕೊಂಡರು. ಮೊದಲಿನಂತೆಯೇ ಗೌರವದಿಂದ ಮಾತನಾಡಿಸಿ 'ನೀವು ನಿಶ್ಚಿಂತರಾಗಿರಿ, ನಿಮ್ಮ ನೇಮಕದ ಪತ್ರ ನಿಮ್ಮ ಮನೆ ಬಾಗಿಲಿಗೇ ಬರುವುದು ಅಂದರು.

ನಾನು ಬಂದೆ. ಕೆಲಸವಾಯಿತು ಅಂದುಕೊಂಡು ಸಂತೋಷದಿಂದಿದ್ದೆ. ಆ ದಿನ ಹೋಗಿ ಈ ದಿನ ಬಂದಿದೆ. ಪತ್ರ ಮಾತ್ರ ಇಂದಿನವರೆಗೂ ಬಂದಿಲ್ಲ.

ಇದರಿಂದಾಗಿ ನನಗೆ ವಿಷಾದವಾಗುತ್ತಿದೆ ಎಂದು ಇದರರ್ಥವಲ್ಲ. ನಾನು ಬೇರೊಂದು ಪ್ರಪಂಚದಲ್ಲಿ ವಾಸಿಸುತ್ತಿದ್ದೆ. ವಾಸ್ತವವಾಗಿ ನಾನು ಉಳ್ಳ ಕುಟುಂಬದಿಂದ ಬಂದವನು, ಆರಾಮಾಗಿ ಸಾಗುತ್ತಿದ್ದ ವ್ಯಾಪಾರದಲ್ಲಿ ಕೈಹಾಕಿದವನು. ನನ್ನ ತಂದೆ ನನ್ನ ಜೊತೆಗಿದ್ದರು, ಹೀಗಾಗಿ ನಾನು ಆದರ್ಶಗಳ ಜೊತೆ ಆಡುವ ಅವಕಾಶ ದೊರೆಯಿತು, ಒಂದು ವೇಳೆ ನನ್ನ ಬದುಕು ಬಡತನದಿಂದೇನಾದರೂ

ಶುರುವಾಗಿದ್ದಿದ್ದರೆ ಆವಶ್ಯಕತೆಗಳು ನನ್ನೆಲ್ಲ ಶಕ್ತಿಯನ್ನು ಹಿಂಡಿಬಿಡುತ್ತಿದ್ದವೋ ಏನೋ.

ಮನೆಗೆ ಹಿಂತಿರುಗಿ ತಂದೆಯವರಿಗೆ ಕತೆ ಹೇಳಿದಾಗ ಅವರು ಸುಮ್ಮನಾದರು. ಅವರು ಏನು ತಾನೆ ಮಾತನಾಡಿಯಾರು, ಲಂಚವನ್ನೇಕೆ ಕೊಟ್ಟು ಬರಲಿಲ್ಲ ಎಂದು ಕೇಳಿದ್ದರೆ ಕೇಳಬೇಕಿತ್ತು. ಆದರೆ ಅವರ ಮೌನ, ದೊಡ್ಡ ಮಗ ಮೊದಲೇ ವ್ಯಾಪಾರ ಬಿಟ್ಟು ಶಾಂತಿನಿಕೇತನಕ್ಕೆ ಹೋಗಿ ಕುಳಿತಿದ್ದಾನೆ. ಇನ್ನು ಈ ಎರಡನೆಯ ಮಗನ ಬುದ್ಧಿ ಎಷ್ಟು ಕೆಟ್ಟು ಹೋಗಿದೆ ಅಂದರೆ ಕೈಗೆ ಸಿಕ್ಕಿದ ಕೆಲಸವನ್ನೂ ಬಿಸಾಡಿ ಬಂದಿದ್ದಾನೆ, ಎಂದು ಹೇಳಿಕೊಳ್ಳತ್ತಿತ್ತೇನೊ. ನನಗನ್ನಿಸುವಂತೆ ಆಬಂಗಾಳಿ ಮನುಷ್ಯ ಮಾಡಿದಂತೆ ನನ್ನ ತಂದೆಯವರು ಸಹ ವ್ಯಾಪಾರಿಗಳ ಪಟ್ಟಿಯಿಂದ ನನ್ನ ಹೆಸರನ್ನು ಕಿತ್ತುಹಾಕಿದ್ದಿರಬಹುದು.

ನನ್ನ ಬಗ್ಗೆ ನನ್ನ ತಂದೆ ವ್ಯವಹರಿಸುತ್ತಿದ್ದ ರೀತಿಯೂ ಕೊಂಚಕೊಂಚ ಬದಲಾಗತೊಡಗಿತು. ಇದಕ್ಕಿಂತ ಮುಂಚೆ ನಾನು ಯಾವುದಾದರೂ ಕಾದಂಬರಿಯನ್ನು ಓದುತ್ತಲೊ ಅಥವಾ ಏನನ್ನಾದರೂ ಬರೆಯುತ್ತಲೋಓದುತ್ತಲೊ ಕುಳಿತಿದ್ದು ನೋಡಿದ ಕೂಡಲೆ ಕೊಂಚ ಕೋಪದಿಂದಲೇ ಅಲ್ಲಿಂದ ಏಳಿಸುತ್ತಿದ್ದರು– 'ಏಳಯ್ಯ, ಅಲ್ಲಿ–ಇಲ್ಲಿ ಓಡಾಡುವುದು [illegible] ಪುಸ್ತಕ ಹಿಡಿದುಕೊಂಡು ಕುಳಿತು ಬಿಟ್ಟಲ್ಲ!' ಆ[illegible] ಈಗ ಹಾಗೆ ಹೇಳುವುದನ್ನು ಬಿಟ್ಟರು. ದಿನವಿಡೀ ಪೇಟೆಯಲ್ಲಿ ಸುತ್ತಾಡಿ ಮನೆಗೆ ಬಂದ ಕೂಡಲೇ ಯಾವುದಾದರೊಂದು ಪುಸ್ತಕ ಹಿಡಿದು ಕೂಡುತ್ತಿದ್ದೆ. ಇದರಿಂದ ನನಗೆ ಅಪಾರವಾಗಿ ತೃಪ್ತಿ ಸಿಗುತ್ತಿತ್ತು. ಯಾವ ಪ್ರಪಂಚದಿಂದ ಹೊರಶಳ್ಳಲ್ಪಟ್ಟಿದ್ದೆನೋ ಅದೇ ಪ್ರಪಂಚಕ್ಕೆ ನಾನು ಮತ್ತೆ ಹಿಂತಿರುಗಬಲ್ಲೆ ಎಂದನ್ನಿಸುತ್ತಿತ್ತು. ನನಗೆ ಪುಸ್ತಕಗಳನ್ನು ಓದಲು ಒಂದು ಬಗೆಯ ತೀವ್ರ ಹಸಿವು ನನ್ನೊಳಗೆ ಗರಿಗೆದರಲಾರಂಭಿಸಿತು. ಇದು ಸಾಹಿತ್ಯದಲ್ಲಿ ಎಂ.ಎ. ಪಾಸುಮಾಡಿ ವ್ಯಾಪಾರೋದ್ಯಮಕ್ಕೆ ಹೋದದ್ದರ ಫಲ.

ಆ ದಿನಗಳಲ್ಲಿಯೇ ಮತ್ತೊಂದು ಭಾವನೆ ನನ್ನನ್ನು ಕಾಡುತ್ತಿತ್ತು. 1942ರ ಆಂದೋಲನ ಆರಂಭವಾಗಿತ್ತು. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸುದ್ದಿಗಳು ನಮ್ಮನ್ನು ಬಹುವಾಗಿ ಉದ್ರೇಕಗೊಳಿಸುತ್ತಿದ್ದುವು. ಮುಂಬಯಿಯಲ್ಲಿ ಅಂಗೀಕೃತವಾದ ನಿರ್ಣಯದ ನಂತರ ನಾಯಕರುಗಳನ್ನು ಬಂಧಿಸಿದ ಕೂಡಲೆ ಇಡೀ ದೇಶದಲ್ಲಿ ಭೂ–ಕಂಪವಾದಂತಾಯಿತು. ನನ್ನ ಮನಸ್ಸಿನಲ್ಲಿ ಕಾಂಗ್ರೆಸ್ ನಾಯಕರ ಬಗ್ಗೆ ಅಗಾಧವಾದ ಗೌರವವಿತ್ತು, ನೆಹರೂ ಯಾವಾಗಲಾದರೂ ನಗರಕ್ಕೆ ಬಂದರೆ ಸಾಕು ನಾನು ಒಂದು ಸಾರಿಯಲ್ಲ, ಮೂರು–ಮೂರು ಸಾರಿ ಮೈಲಿಗಟ್ಟಲೆ ಓಡಿಹೋಗಿ ಅವರನ್ನು ನೋಡುತ್ತಿದ್ದೆ. ಸೇವಾ ಗ್ರಾಮದಲ್ಲಿ ಗಾಂಧೀಜಿಯವರನ್ನೂ ಹತ್ತಿರದಿಂದ ನೋಡಿದ್ದೆ, ಅಷ್ಟೇ ಅಲ್ಲ, ಅವರೊಂದಿಗೆ ಎರಡು ಮೂರು ಮಾತುಗಳನ್ನೂ ಆಡಿದ್ದೆ, ಲಕ್ಷ ಲಕ್ಷ ಯುವಕರ ಹೃದಯಗಳು ನನ್ನ ಹೃದಯದಂತೆಯೇ ಈ ಆಂದೋಲನದೊಡನೆ ಸ್ಪಂದಿಸುತ್ತಿದ್ದವು. ಆಂದೋಲನ ಆರಂಭವಾದದ್ದೇ ತಡ ನಮ್ಮೂರಿನಲ್ಲೂ ಬಂಧಿಸುವ ಕಾರ್ಯ ಶುರುವಾಯಿತು. ಈಗ ನನ್ನಿಂದ ಮನೆಯಲ್ಲಿ ಸುಮ್ಮನೆ ಕೂಡಲು ಸಾಧ್ಯವಾಗಲಿಲ್ಲ. ನನ್ನಿಂದ ಇನ್ನೇನೂ ಮಾಡಲಾಗಲಿಲ್ಲ – ನಾನು ಖಾದಿ ತೊಡಲು ಆರಂಭಿಸಿದೆ. ಖಾದಿ ಜುಬ್ಬ–ಪೈಜಾಮ ತೊಟ್ಟು ರಸ್ತೆಗಳಲ್ಲಿ ಸುತ್ತುತ್ತಿದ್ದ ನಾನು ಒಳಗೊಳಗೇ, ಪೋಲೀಸರು ಈ ಉಡುಪನ್ನೇ ನನ್ನ ಬಂಡಾಯವೆಂದು ಪರಿಭಾವಿಸಿ ನನ್ನನ್ನು ಬಂಧಿಸಬಹುದು ಎಂದು ಲೆಕ್ಕ ಹಾಕುತ್ತಿದ್ದೆ. ಆದರೆ ನನ್ನನ್ನು ಯಾರೂ ಹಿಡಿಯಲಿಲ್ಲ. ಹೀಗಾಗಿ ನನ್ನ ಆಂದೋಲನ ಖಾದಿ ಉಡುಪನ್ನು ತೋಡುವಷ್ಟಕ್ಕೆ ಸೀಮಿತವಾಯಿತು. ವ್ಯಾವಹಾರಿಕ ಮಟ್ಟದಲ್ಲಲ್ಲದೆ ಹೋದರೂ ಭಾವನೆಯ ಮಟ್ಟದಲ್ಲಾದರೂ ಒಂದಲ್ಲ ಒಂದು ಸ್ತರದಲ್ಲಿ ನಾನು ದೇಶದ ಸ್ವಾತಂತ್ರ್ಯಾಂದೋಲನದಲ್ಲಿ ಪ್ರಾಣವನ್ನೂ ಪಣವಿಟ್ಟು ಹೋರಾಡುತ್ತಿರುವ ಜನಗಳೊಂದಿಗೆ ಮಿಳಿತಗೊಂಡಿದ್ದೇನೆ ಎಂಬ ವಿಚಾರದಿಂದಾಗಿ ಅಲ್ಪ ಸ್ವಲ್ಪ ಸಂತೋಷ ದೊರೆಯಲಾರಂಭಿಸಿತು.

ಎಲ್ಲ ಮುಗಿದು ವಾತಾವರಣ ತಿಳಿಯಾಗಿ, ಯುದ್ಧ ಮುಗಿದು ಕಾಂಗ್ರೆಸ್ ಕಛೇರಿಗಳ ಬಾಗಿಲುಗಳು ತೆರೆಯಲಾರಂಭಿಸಿದಾಗ ನಾನು ನೇರವಾಗಿ ಕಾಂಗ್ರೆಸ್ ಕಛೇರಿಗೆ ಹೋಗಿ ಕಾಂಗ್ರೆಸ್‌ನಲ್ಲಿ ನನ್ನ ಹೆಸರನ್ನೂ ಬರೆಸಿದೆ, ಅಲ್ಲಿಂದ ಮುಂದೆ ಸಕ್ರಿಯವಾಗಿ ಕಾಂಗ್ರೆಸ್ ಕೆಲಸವನ್ನು ಮಾಡತೊಡಗಿದೆ. ಹೀಗೆ ದಿನಗಳು ಕಳೆಯಲಾರಂಭಿಸಿದೆ. ಆ ದಿನಗಳಲ್ಲಿ ನಾನು ಒಂದೇ ಕಾಲದಲ್ಲಿ ಮೂರು-ಮೂರು ಕೆಲಸ ಮಾಡುತ್ತಿದ್ದೆ— ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕನಾಗಿ ಪಾಠ ಹೇಳುತ್ತಿದ್ದೆ; ನಾಟಕಗಳಲ್ಲಿ ಅಭಿನಯಿಸುತ್ತಿದ್ದೆ; ಪೇಟೆಯಲ್ಲಿ ವ್ಯಾಪಾರ ಮಾಡುತ್ತಿದ್ದುದರ ಜೊತೆಗೆ ಕಾಂಗ್ರೆಸ್ ಕೆಲಸವನ್ನು ಮಾಡುತ್ತಿದ್ದೆ.

ಮಾರ್ಕ್ಸ್‌ವಾದಿ ವಿಚಾರ ಧಾರೆಯತ್ತ ನನ್ನ ಒಲವು ಮೂಡಿದ್ದು ಸಹ ಆ ದಿನಗಳಲ್ಲೇ. ಎರಡನೆ ವಿಶ್ವಯುದ್ಧದ ದಿನಗಳಲ್ಲಿ ರಜನಿ ಪಾಮ್‌ದತ್‌ರ Raise of Nationalism in Europe ಎಂಬ ಪುಸ್ತಕ ನನಗೆ ಲಭ್ಯವಾಯಿತು. ಈ ಪುಸ್ತಕದಲ್ಲಿ ಯುರೋಪ್‌ನಲ್ಲಿ ಉದ್ಭವಿಸುತ್ತಿದ್ದ ಫ್ಯಾಸಿಸ್ಟ್ ಶಕ್ತಿಗಳ ಬಗೆಗೆ ಗಂಭೀರವಾದ ವಿಶ್ಲೇಷಣೆ ಇತ್ತು. ಈ ದೃಷ್ಟಿ ನನ್ನ ಪಾಲಿಗೆ ತೀರಾ ಹೊಸದಾಗಿತ್ತು. ಯುದ್ಧದಆತಂಕ ಪಾಮ್‌ದತ್‌ರ ವಿಶ್ಲೇಷಣೆಗೆ ಹೆಜ್ಜೆ ಹೆಜ್ಜೆಗೂ ಸಮರ್ಥನೆ ನೀಡುತ್ತಿತ್ತು. ಇದರ ನಂತರ ಇತರೆ ಅನೇಕ ಪುಸ್ತಕಗಳು ಓದಲು ದೊರೆತವು. ನನ್ನ ಸಹೋದ್ಯೋಗಿ ಅಧ್ಯಾಪಕ ಮಿತ್ರರೊಬ್ಬರು ಕಮ್ಯೂನಿನಿಸ್ಟ್ ಕಾರ್ಯಕರ್ತರಿದ್ದರು. ಆ ವ್ಯಕ್ತಿಯ ಅವಿಶ್ರಾಂತ ನಿಸ್ವಾರ್ಥ ದುಡಿಮೆ, ಸ್ಫುಟಗೊಂಡ ದೃಷ್ಟಿ ಹಾಗೂ ಆಳವಾದ ನಿಷ್ಠೆಯಿಂದ ತುಂಬಾ ಪ್ರಭಾವಿತನಾದೆ. ಸಾಂಪ್ರದಾಯಿಕ ದಂಗೆಗಳು ನಡೆಯುತ್ತಿದ್ದ ಆ ದಿನಗಳಲ್ಲೂ ಅವರು ಮತ್ತು ಅವರ ಕೆಲವರು ಮಿತ್ರರು ಪ್ರಾಣವನ್ನು ಲೆಕ್ಕಿಸದೆ ದಂಗೆಗಳನ್ನು ತಡೆಯಲು ಯತ್ನಿಸುತ್ತಿದ್ದರು.

ರಕ್ತಕ್ರಾಂತಿಯ ದಿನಗಳೂ ಬಂದವು. ದೇಶದ ವಿಭಜನೆಯ ಮುಂಚೆ ನಮ್ಮ ಊರು ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಭಾರಿ ಜಗಳ–ಮನಸ್ತಾಪಗಳಾದುವು. ಪುನಃ ಬುದ್ಧಿ ಮತ್ತು ಹೃದಯವನ್ನು ಜಡತ್ವ ಆವರಿಸಿತು. ನಾನು ಕೈಗೊಂಬೆಯಂತೆ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ, ಸುತ್ತತೊಡಗಿದೆ. ದಂಗೆಗಳು ತುಂಬಾ ಕೆಟ್ಟ ಬಗೆಯಲ್ಲಿದ್ದುದೇನೋ ನಿಜ, ಆದರೆ ಎಲ್ಲಕ್ಕಿಂತಲೂ ಭಯಂಕರವಾದ ಸಂಗತಿಯೆಂದರೆ ಅವುಗಳ ಮೇಲೆ ಯಾರ ಹತೋಟಿಯೂ ಇರಲಿಲ್ಲ. ರಕ್ತಕ್ರಾಂತಿಯ ನಂತರ ಜನ ಹಳ್ಳಿಗಳಿಂದ ಪಟ್ಟಣಗಳ ಕಡೆ ದೌಡಾಯಿಸಲಾರಂಭಿಸತೊಡಗಿದಕೂಡಲೆ ನಾನು ರಿಲೀಫ್ ಕಮಿಟಿಗೆ ಅಂಕಿ ಸಂಖ್ಯೆಗಳನ್ನು ಕಲೆ ಹಾಕುವ ಕೆಲಸ ಮಾಡುತ್ತಿದ್ದೆ - ಎಲ್ಲಿ ಎಷ್ಟು ಮಂದಿ ಸತ್ತರು, ಎಷ್ಟು ಮನೆಗಳು ಸುಟ್ಟು ಹೋದುವು, ಎಷ್ಟು ಹೊಲಗದ್ದೆ-ತೋಟ ತುಡಿಕೆಗಳು ನಾಶವಾದುವು ಎಂಬೆಲ್ಲ ಮಾಹಿತಿಗಳನ್ನು ಕುರಿತಂತೆ. ಹಳ್ಳಿ-ಹಳ್ಳಿಗಳಿಂದ ಬರುತ್ತಿದ್ದ ಜನಗಳ ಕತೆಗಳಿನ್ನು ಕೇಳಿ ನನ್ನ ರಿಜಿಸ್ಟರ್ ಅನ್ನು ಕಪ್ಪು ಮಾಡುತ್ತ ಹೋಗುತ್ತಿದ್ದೆ. ನನ್ನ ವಿರುದ್ಧ ಚೇತನದ ಮೇಲೆ ಇದರ ಯಾವೊಂದು ಪ್ರಭಾವವೂ ಆಗುತ್ತಿರಲಿಲ್ಲ. ಈ ಮನಸ್ಥಿತಿಯಲ್ಲಿ, ಒಂದು ಹಳ್ಳಿಯ ಹೆಂಗಸರು ತಮ್ಮ ಸಣ್ಣಪುಟ್ಟ ಮಕ್ಕಳನ್ನು ತಳ್ಳಿ ತಾವು ಹಾರಿ ಅಸು ನೀಗಿದ ಬಾವಿಯ ದಡದ ಮೇಲೆ ಹೋಗಿ ಒಂದು ದಿನ ನಾನು ನಿಂತೆ. ಹೆಣಗಳು ಕೊಳೆತು ನಾರುತ್ತ ತೇಲುತ್ತಿದ್ದವು, ಬಾವಿಯ ಸುತ್ತಮುತ್ತ ನಿಂತಿದ್ದ ಅವರ ಗಂಡಂದಿರು ಮತ್ತು ಸಂಬಂಧಿಕರು ಅವರನ್ನು ಗುರುತಿಸಲು ಪ್ರಯತ್ನಿಸುತ್ತಿದ್ದರು....

ಮನಸ್ಸು ಜಡವಾದಂತೆ ಅನ್ನಿಸಿದಾಗಲೆಲ್ಲ ಒಳಗೊಳಗೆ ಏನೊ ಒಂದು ಮುರಿದಂಥ ಭಗ್ನಗೊಂಡಂಥ–ಒಂದು ನಂಬಿಕೆ, ಒಂದು ವಿಶ್ವಾಸ, ಅದೇನೆಂದು ಹೇಳಲುಗುತ್ತಿಲ್ಲ ಏಕೆಂದರೆ ಅದರಿಂದ

ದ್ದೂ ಮೂಡಿಬರುವುದಿಲ್ಲ – ಅನುಭವ
ದ. ಹೀಗಾದಾಗಲೆಲ್ಲ ನೋವಿನ ಅನುಭವ
ಲ್ಲವಾದರೂ ಎಲ್ಲೋ ಏನೋ ಮುರಿ
ನುಭವ ಮಾತ್ರ ಅವಶ್ಯ ಆಗುತ್ತದೆ.
ಗಳ, ಪರಿಸ್ಥಿತಿಗಳ ವಿವರಗಳನ್ನು ತುಂಬ
ಬದ್ಧ ರೀತಿಯಲ್ಲಿ ಮಂಡಿಸುವುದಾದರೂ
ಮನಸ್ಸಿನ ವರ್ತುಲದೊಡನೆ ಇವುಗಳ
ಅಸ್ಪಷ್ಟಕ್ಕಸ್ಪಷ್ಟ ಇರುತ್ತದೆ. ನಿಜವಾದ ನಾಟಕ
ೂ ಅಲ್ಲಿಯೇ ನಡೆಯುವುದು. ಯಾವುದಾದ
ಘಟನೆ ಸುಪ್ತ ಮನಸ್ಸಿನ ಮೇಲೆ ಚೇಳಿನಂತೆ
ಹೋಯಿತೆಂದರೆ, ಯಾವುದಾದರೊಂದು
ಅದರ ಆಳವಾದ ನಿರಿಗೆಗಳಲ್ಲಿ ಸಿಲುಕಿಕೊಂಡಿ
ಇವೆಲ್ಲ ಆಗುವುದು ನಮಗರಿವಿಲ್ಲದಂತೆಯೇ.
ನ್ನು ಹಿಡಿದುಕೊಳ್ಳಲು ಮಾಡುವ ಪ್ರಯ
ಕೈಗೆಸಿಕ್ಕುವುದು ಅವುಗಳ ಅರ್ಥಂಭರ್ಥ
ು ಮಾತ್ರ.... ಯಾವನೋ ಒಬ್ಬ ಪ್ರೇಕ್ಷಕ
ಮೇಲೆ ನಾಣ್ಯವನ್ನು ಎಸೆದದ್ದರಿಂದ
ಮೇಲೆ ಬೆಳಕಿನ ವೃತ್ತದಲ್ಲಿ ನೃತ್ಯ ಮಾಡು
ನರ್ತಕಿ ? ಒಮ್ಮೆಗೇ ಕುಪಿತಗೊಂಡಿದ್ದಾಳೆ.
ನೋ ಒಬ್ಬ ವ್ಯಕ್ತಿಯನ್ನು ಜನ ಕಂಬಕ್ಕೆ

ಪಕ್ಕಾದವರು, ವ್ಯವಹಾರಿಕ ಪ್ರಪಂಚದಲ್ಲಿ ಕೃಷಿಕ ರೆಂದು ಪರಿಗಣಿತರಾದವರು ತಮ್ಮ ಆಸೆಯನ್ನು ಪೂರೈಸಿಕೊಳ್ಳಲು ಬಹುಶಃ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸುತ್ತಾರೆ ಎಂದು ಕಾಣುತ್ತದೆ.

ಮನೆಯಲ್ಲಿ ಸಾಹಿತ್ಯಿಕ ವಾತಾವರಣ ಮೊದ ಲಿಂದಲೂ ಇತ್ತು. ತಂದೆ ಶೇಖ್ ಸಾದಿಯ ಆರಾಧ ಕರೂ ತಾಯಿಯ ಬಳಿ ಕತೆಗಳ, ಕವಿತೆಗಳ, ಗಾದೆ ಗಳ ಭಂಡಾರವೇ ಇತ್ತು. ಇದಲ್ಲದೆ ಅಣ್ಣ ತನ್ನ ಕಾಲೇಜು ದಿನಗಳಲ್ಲಿ ಇಂಗ್ಲಿಷ್‌ನಲ್ಲಿ, ಕಾಲೇಜುಬಿಟ್ಟ ನಂತರ ಹಿಂದಿಯಲ್ಲಿ ನಿಯಮಿತವಾಗಿ ಬರೆಯುತ್ತಿ ದ್ದರು. ವ್ಯಾಪಾರದ ಉದ್ದೇಶಕ್ಕಾಗಿ ಕಾನ್‌ಪುರಕ್ಕೆ ಹೋಗುವ ಹಾದಿಯಲ್ಲಿ ಸಾಮಾನ್ಯವಾಗಿ ನಾನು ದೆಹಲಿಯಲ್ಲಿ ತಂಗುತ್ತಿದ್ದ. ನನ್ನ ಅತ್ತೆಯ ಮಗಳು ಶ್ರೀಮತಿ ಸತ್ಯವತಿಮಲ್ಲಿಕ್ ಅವರ ಮನೆ ಸಾಹಿತ್ಯದ ಕೇಂದ್ರದಂತಿತ್ತು. ಇಲ್ಲಿಯೇ ನಾನು ಆ ದಿನಗಳಲ್ಲಿ ಅನೇಕ ಅನೇಕ ಕೃತಿಗಳನ್ನು ಓದಿದೆ. ಜೈನೇಂದ್ರರ 'ತ್ಯಾಗಪತ್ರ' ಕಾದಂಬರಿ ಆ ದಿನಗಳಲ್ಲಿ ತುಂಬಾ ಚರ್ಚಿತವಾಗುತ್ತಿತ್ತು. ಅದನ್ನು ಹಾಗೂ ಅಜ್ಞೇ ಯರ ಕೆಲವಾರುಕತೆಗಳನ್ನು ಆದರಲ್ಲೂ 'ಕೋಠರೀ ಕೀಬಾತ್' ಅನ್ನು ಓದಿದೆ. ಈ ಎರಡು ಬರವಣಿಗೆ

ಪ್ರಮುಖ ಪತ್ರಿಕೆಗಳೆಂದು ಪರಿಗಣಿಸಲ್ಪಟ್ಟಿದ್ದುವು, ಅವುಗಳಲ್ಲಿ ಪ್ರಕಟಣೆಗೆಂದು ನನ್ನ ಬರಹಗಳನ್ನು ಕಳಿಸತೊಡಗಿದೆ. ಆಗ ಸಾಹಿತ್ಯಿಕ ವಾದ ಅಷ್ಟು ಆಗುತ್ತಿರಲಿಲ್ಲ. ಆದರೆ ವಿಭಜನೆಯ ನಂತರ ನನ್ನ ಊರನ್ನು ಬಿಟ್ಟು ದೆಹಲಿಗೆ ಬಂದು ನೆಲಸಲಾರಂಭಿ ಸಿದ ಮೇಲೆ ಹೆಚ್ಚು ನಿಯಮಿತವಾಗಿ ಬರೆಯಲಾ ರಂಭಿಸಿದೆ.

ನನ್ನ ಬದುಕಿನಲ್ಲಾದಂತೆ ಸಾಹಿತ್ಯ ಕ್ಷೇತ್ರದಲ್ಲಿ ನನ್ನ ಅನುಭವಗಳು ಸಮತಟ್ಟಾದ, ನೇರವಾದ ಅನುಭವಗಳೇ. ನಾನು ನಂಬಿರುವಂತೆ ವ್ಯಕ್ತಿಯಿಂದ ಹೊರತಾದ ಸಾಹಿತ್ಯ ಎಂಬುವ ಯಾವೊಂದು ವಸ್ತುವೂ ಇಲ್ಲ. ನಾನಿರುವಂತೆ ನಾನು ಬರೆಯ ಬಲ್ಲೆ, ನನ್ನ ಸಂಸ್ಕಾರಗಳು, ಅನುಭವಗಳು, ನನ್ನ ವ್ಯಕ್ತಿತ್ವ, ನನ್ನ ದೃಷ್ಟಿ– ಈ ಎಲ್ಲವೂ ಸಮಷ್ಟಿ ಯಾಗಿ ಕೃತಿಯನ್ನು ಸೃಷ್ಟಿಸುತ್ತವೆ. ಇವುಗಳಲ್ಲಿ ಯಾವುದೇ ಒಂದು ಜಳ್ಳಾದರೂ ಸಾಕು ಇಡೀ ಕೃತಿಯೇ ಜಳ್ಳಾಗಿ ಬಿಡುತ್ತದೆ. ಸಾಹಿತ್ಯಿಕ ಕೃತಿ ವಿಚಾರಗಳ ಅಭಿವ್ಯಕ್ತಿಗೆ ಮಾಧ್ಯಮವೋ ಅಥವಾ ಅಲ್ಲವೋ ಎಂಬುದನ್ನು ಕುರಿತು ಚರ್ಚಿಸುವುದು ಅಸಂಗತ. ನನ್ನ ದೃಷ್ಟಿಯಲ್ಲಿ ಪ್ರತಿಯೊಂದು ಕೃತಿ

ಘಟನೆಗಳ, ಪರಿಸ್ಥಿತಿಗಳ ವಿವರಗಳನ್ನು ತುಂಬ ತರ್ಕ ಬದ್ಧ ರೀತಿಯಲ್ಲಿ ಮಂಡಿಸಬಹುದಾದರೂ ಸುಪ್ತ ಸ್ಸಿನ ವರ್ತುಲದೊಡನೆ ಇವುಗಳ ಸಂಬಂಧ ಅಸ್ಪಷ್ಟಕ್ಕಸ್ಪಷ್ಟ ಇರುತ್ತದೆ. ನಿಜವಾದ ನಾಟಕಗಳಾದರೂ ಅಲ್ಲಿಯೇ ರುವುದು. ಯಾವುದಾದರೊಂದು ಘಟನೆ ಸುಪ್ತ ಮನಸ್ಸಿನ ಮೇಲೆ ಚೇಳಿನಂತೆ ಕುಟುಕಿ ಹೋ... ವುದಾದರೊಂದು ನೆನಪು ಅದರ ಆಳವಾದ ನಿರಿಗೆಗಳಲ್ಲಿ ಸಿಲುಕಿಕೊಂಡಿತೆಂದರೆ ಅವುಗಳನ್ನು ಹಿಡಿದುಕೊ... ಡುವ ಪ್ರಯತ್ನದಲ್ಲಿ ಕೈಗೆ ಸಿಕ್ಕುವುದು ಅವುಗಳ ಅರ್ಥಂಬರ್ಥ ಚಿತ್ರಗಳು ಮಾತ್ರ....

ು ಕಟ್ಟಿ, ಕಟ್ಟಿದ ಹಗ್ಗವನ್ನು ಎಷ್ಟರ
ಗೆ ಕಳೆಯುತ್ತಿದ್ದಾರೆ. ಅಂದರೆ ಕಟ್ಟಿಸಿಕೊಂಡ
ಣ್ಣುಗುಡ್ಡೆಗಳು ಹೊರಬರುತ್ತಿವೆ, ಇದನ್ನು
ತಲು ಮನೆಯ ಹೊರಗೆ ಜನ ನಿಂತಿದ್ದಾರೆ.
ರ್ಸ್‌ನ ಮೆರವಣಿಗೆಯಲ್ಲಿ ರಂಗಸ್ಥಳದಲ್ಲಿ ನಿಂತ
ತಲ ಮನುಷ್ಯ ಕೈ ಎತ್ತಿ ಕಿರುಚಿಕೊಳ್ಳುತ್ತಿ
–'ಉಪ್ಪಿನ ಕಾನೂನನ್ನು ನಾನು ಮುರಿದಿ
, ನನ್ನ ಕೈಲಿ ಉಪ್ಪಿನ ಉಂಡೆ ಇದೆ ನೋಡಿ'
ಇನ್ನೊಂದುಕಡೆಯಿಂದ ಪೋಲಿಸರು ಮತ್ತು
ರಿಗಳು ಬಂದು ಅವನನ್ನು ಮುತ್ತಿಗೆ ಹಾಕು
, ನಂತರ ಪೋಲಿಸ್‌ವ್ಯಾನ್‌ನಲ್ಲಿ ಹಾಕಿ
ು ಕರೆದೊಯ್ಯುತ್ತಾರೆ. ಆಗಲೂ ಅವನು
ುತ್ತಿದ್ದಾನೆ–'ಭಾರತ್ ಮಾತಾ ಕೀ ಜಯ್!
ತ್ಮಾ ಗಾಂಧೀ ಕೀ ಜಯ್' ಬಗೆಬಗೆಯ
ಗಳು, ಅಸಂಖ್ಯ ಅಪೂರ್ಣ ಚಿತ್ರಗಳು. ಈ
ರ್ಥ ಚಿತ್ರಗಳ, ಸಂಸ್ಕಾರಗಳ, ಅನುಭವಗಳ
ಾಳವನ್ನು ಹೊತ್ತು ನಾನು ಸಾಹಿತ್ಯ ಕ್ಷೇತ್ರ
ಪ್ರವೇಶಿಸಿದೆ. ಪರಿಸ್ಥಿತಿಗಳ ಒತ್ತಡದಿಂದ
ಮು

ಗಳಲ್ಲಿ ಆಡಗಿದ ಆಳವಾದ ನೋವು ಬಹಳ ಹೊತ್ತಿನ ವರೆಗೂ ನನ್ನನ್ನು ಆವರಿಸಿತ್ತು. ಆ ದಿನಗಳಲ್ಲೇ ಪ್ರಮಾಣದಲ್ಲಿ ಮೊಟ್ಟಮೊದಲಸಾರಿ 'ಗೋದಾನ್' ಕಾದಂಬರಿ ಓದಿದೆ. ಇದರಲ್ಲಿ ಇಡೀ ದೇಶದ ಕಥೆ ಇತ್ತು; ಇದರಲ್ಲಿ ಇಡೀ ದೇಶ ಸ್ಪಂದಿಸುತ್ತಿತ್ತು. 'ಗೋದಾನ್' ಓದುವುದು ನನಗೊಂದು ವಿಲಕ್ಷಣ ಅನುಭವವಾಗಿ ತೋರಿತು. ಈ ಕಾದಬರಿಯನ್ನು ಓದಿದ ನಂತರ ನಮ್ಮ ದೇಶದ ಪ್ರತಿಯೊಬ್ಬ ರೈತನೂ ನನಗೆ ಹೋರಿರಾಮನಂತೆಯೇ ಕಂಡ. ಈ ಎಲ್ಲರ ನೋವನ್ನೂ ಸಮಸ್ಯೆಗಳನ್ನು ನಾನು ಅನುಭವಿಸಿದ್ದೆ, ಕಂಡಿದ್ದು. ಪ್ರೇಮಚಂದರದಲ್ಲಿದ್ದ ಒಂದು ವಿಶಾಲದೃಷ್ಟಿ ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಆಗಲೇ ಯಶ್‌ಪಾಲರ ಪಿಂಜರೆ ಕೀ ಉಡಾನ್ ಹಾಗೂ 'ಜ್ಞಾನ್‌ದಾನ' ಕಥಾಸಂಗ್ರ ಹಗಳನ್ನೂ ಓದಿದೆ.

ಈ ಬಗೆಯಲ್ಲಿ ಕ್ರಮ–ಕ್ರಮೇಣ ನಾನು ಸಾಹಿತ್ಯ ಕ್ಷೇತ್ರದ ಸೆಳತಕ್ಕೆ ಒಳಗಾದೆ. ಆಗ 'ವಿಶಾಲ್– ಭಾರತ್' ಹಾಗೂ 'ಹಂಸ್' ಪತ್ರಿಕೆಗಳು ಹಿಂದಿಯ

ಯೂ ಒಂದು ಯೂನಿಟ್ ಆಗಿರುತ್ತದೆ; ಸಂಶ್ಲಿಷ್ಟ ವೂ ಅವಿಭಾಜ್ಯವೂ ಆಗಿರುತ್ತದೆ, ಇದರಿಂದ ಯಾವೊಂದು ಅಂಶವನ್ನೂ– ವಿಚಾರ, ಶಿಲ್ಪ, ಶಬ್ದ –ಪ್ರತ್ಯೇಕಗೊಳಿಸಲಾಗುವುದಿಲ್ಲ. ಇವೆಲ್ಲದರ ಸಮಂಜಸ್ಯದಿಂದ ಒಂದು ಕೃತಿಯ ಅಸ್ತಿತ್ವ ನಿರ್ಮಾಣವಾಗುತ್ತದೆ. ಇವುಗಳಲ್ಲಿ ಯಾವುದೇ ಒಂದು ಗುರಿಯೂ ಅಲ್ಲ ಗುರಿ ತಲುಪುವ ಸಾಧನವೂ ಅಲ್ಲ. ಈ ಒಂದು ಯೂನಿಟ್ ಮೂಲತಃ ಬದು ಕಿನ ಗರ್ಭದಿಂದ ಮೂಡಿಬರುತ್ತದೆ. ಲೇಖಕನ ಸಂವೇದನೆ ಬದುಕಿನಿಂದ ಬಹಳಷ್ಟನ್ನು ಗ್ರಹಿಸಿ ಕೊಳ್ಳುತ್ತದೆ. ಲೇಖಕ ಶಿಲ್ಪ ಮತ್ತು ಶಬ್ದಗಳ ಮಾಯಾಜಾಲವನ್ನೇ ಸೃಷ್ಟಿಸಿದರು ಸಹ ಆತನ ಬೌದ್ಧಿಕ ಕಸರತ್ತಿನಿಂದ ರೂಪುಗೊಂಡ ಕೃತಿ ಅರ್ಥಂ ಬರ್ಥ ಸತ್ತ ಕೃತಿಯಾಗಿರುತ್ತದೆ. ಲೇಖಕ ಕಂಡು ಕೊಂಡ ಸತ್ಯ, ಬದುಕಿನ ಸತ್ಯ ಬೇರೆಬೇರೆಯಾಗಿರು ವುದಿಲ್ಲ. ಅಂತೆಯೇ ಬದುಕಿನ ಸತ್ಯ ಹಾಗೂ ಲೇಖಕನ ಸತ್ಯ ಎರಡು ಬೇರೆ ಬೇರೆ ಸತ್ಯಗಳೇನಲ್ಲ. ಸತ್ಯ ಒಂದೇ, ಅದೇ ಬದುಕಿನ ಸತ್ಯ. ಈ ಸತ್ಯಕ್ಕೆ ಸಾಹಿತ್ಯ ಶಬ್ದ ಪ್ರದಾನ ಮಾಡುತ್ತದೆ, ಅಷ್ಟೆ.

KRNN 106 PANCHAMA Fortnightly 5, August 1983 Reg. No. 2561-76

ದಲಿತ ವಿದ್ಯಾರ್ಥಿಗಳಿಗೆ ಒಂದು ಬಹಿರಂಗ ಪತ್ರ

ಕೆ. ಎನ್. ಗುರುಪ್ರಸಾದ್

ಈ ದೇಶದ [illegible] ಕೊಳೆತು ಗಬ್ಬೆದ್ದು ನಾರುತ್ತಿರುವ [illegible] ವಸ್ಥೆ[illegible]ದ ನೊಂದು ಬೆಂದು ಬಳಲಿದ ನಾವೆಲ್ಲಾ ದಲಿತ ವಿಮೋಚನೆಗಾಗಿ ಶ್ರಮಿಸಿದ ಅದಕ್ಕಾಗಿಯೇ ಪ್ರಾಣತೆತ್ತ ನಮ್ಮೆಲ್ಲರ ನೆಚ್ಚಿನ ನಾಯಕ ಡಾ॥ ಬಿ. ಆರ್. ಅಂಬೇಡ್ಕರ್‌ರವರ ತತ್ವದ ಆಧಾರದ ಮೇಲೆ ನಿಂತ ದ. ಸಂ. ಸ. ಅಡಿಯಲ್ಲಿ ನಾವೆಲ್ಲಾ ಸಂಘಟಿತರಾಗಿ ಸಮಗ್ರ ಬದಲಾವಣೆಗಾಗಿ, ಶೋಷಣಾಮುಕ್ತ ಸಮಾಜಕ್ಕಾಗಿ, ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಾಗಿ, ವರ್ಗರಹಿತ, ಜಾತಿರಹಿತ, ಸಮಾಜಕ್ಕಾಗಿ, ಹೋರಾಟ ಮಾಡುತ್ತಿರುವ ವಿಷಯ ನಮಗೆ ಮತ್ತು ಈ ದೇಶದ ಬಂಡವಾಳ ಶಾಹಿಗಳಿಗೆ, ಪುರೋಹಿತಶಾಹಿಗಳಿಗೆ, ಜಮೀನ್ದಾರರಿಗೆ ಹಾಗೂ ಶ್ರೀಮಂತರಿಗೆ ಈಗಾಗಲೇ ಗೊತ್ತಾಗಿರುವಂತದ್ದು. ಆದ್ದರಿಂದ ನಮ್ಮ ಈ ಸಂಘಟನೆಯನ್ನು ತುಳಿದು ಹಾಕಲು ನಮ್ಮ ವಿರೋಧಿಗಳ ಗುಂಪು ಮೊದಲಿನಿಂದಲೂ ಪ್ರಯತ್ನ ಪಡುತ್ತಲೇ ಇದೆ. ಈ ದುಷ್ಕರ್ಮಿಗಳ ವಿರುದ್ಧ ನಾವು ಯಾವಾಗಲೂ ಎಚ್ಚರಿಕೆಯಿಂದಿರಬೇಕಾಗಿದೆ. ಎಂದಿಗಿಂತ ಇಂದು ಆ ಅವಶ್ಯಕತೆ ಹೆಚ್ಚಿನದಾಗಿದೆ. ಏಕೆಂದರೆ ಇತ್ತೀಚಿಗೆ [illegible] ಸ್ತಿಕೆ [illegible] ವಿರೋಧಿಗಳ ಎದೆಗ ಗುಂಡಿಟ್ಟಂತಾಗಿ [illegible] ಎದೆ--ತೊಡೆಗಳಲ್ಲಿ ನಡುಕ ಉಂಟಾ[illegible] ನಮ್ಮ ಈ ದಲಿತ ಸಂಘಟನೆಯನ್ನು [illegible] ಹವಣಿಸುತ್ತಿದ್ದಾರೆ. [illegible] ರಿಂದ [illegible] ನಾವು ನಮ್ಮ ಸಂಘಟನೆಯನ್ನು ಹೆಚ್ಚು ಬಲಯುತಪಡಿಸಿಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ ದಲಿತ ವಿದ್ಯಾರ್ಥಿಗಳನ್ನು ನಾವು ಹೆಚ್ಚು ಪ್ರಜ್ಞಾವಂತರನ್ನಾಗಿ ಮಾಡುವ [illegible] ನಮ್ಮೆಲ್ಲರ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. [illegible] ಕಾರಣದಿಂದ ನಮ್ಮ ರಾಜ್ಯದ ಎಲ್ಲಾ ದಲಿತ [illegible]ರ್ಥಿ ನಿಲಯಕ್ಕೂ ಆಯಾ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ದ. ಸಂ. ಸ. ಕಾರ್ಯಕರ್ತರು ಭೇಟಿಕೊಟ್ಟು ಅವರುಹೆಚ್ಚು ಓದಿಕೊಳ್ಳಲು ಮತ್ತು ಉನ್ನತ ಮಟ್ಟದ ವಿದ್ಯಾವಂತರಾಗಲು ಸಹಾಯಕವಾಗುವಂತೆ ತಕ್ಕ ಪರಿಸರವನ್ನುಂಟುಮಾಡಬೇಕಾಗಿದೆ. ವ್ಯಾಸಂಗ ಮಾಡಲು ಅಡ್ಡಿಯಾಗಿರುವ ಸಮಸ್ಯೆಗಳ ಬಗ್ಗೆ ತೀವ್ರ ಗಮನಹರಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಜರೂರು ಕ್ರಮ ಕೈಗೊಳ್ಳಲು ಒತ್ತಾಯಿಸಬೇಕು ಮತ್ತು ಮುಖ್ಯವಾಗಿ ಹೈಸ್ಕೂಲ್ ಹಾಸ್ಟೆಲ್‌ಗಳಿಗೆ ಭೇಟಿಕೊಟ್ಟು ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ವಿಚಾರಿಸಿ ನಾವೆಲ್ಲಾ ವಿದ್ಯಾವಂತರಾಗಬೇಕಾದ ಅನಿವಾರ್ಯತೆಯನ್ನು ಅವರಿಗೆ ಮನಮುಟ್ಟುವಂತೆ ಸಮರ್ಪಕವಾದ ರೀತಿಯಲ್ಲಿ ತಿಳಿಸಬೇಕು. ಈ ದಿಶೆಯಲ್ಲಿ ದ. ಸಂ. ಸ. ದ ವಿದ್ಯಾವಂತ ಕಾರ್ಯಕರ್ತರು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನಲ್ಲೇ ಸೂಕ್ತ ಸಮಯದಲ್ಲಿ ಒಂಡೆದೆ ಸೇರಿಸಿ ಅವರಿಗೆ ಕಷ್ಟಕರವಾಗಿ ಕಾಣುವ ವಿಷಯಗಳನ್ನು ಟೀಚ್ ಮಾಡಿದರೆ ಅವರ ವಿದ್ಯಾಭ್ಯಾಸಕ್ಕೆ ಬಹಳ ಅನುಕೂಲವಾಗುತ್ತದೆ. ನಮ್ಮ ರಾಜ್ಯದಲ್ಲಿರುವ ಹೈಸ್ಕೂಲ್ ಹಾಸ್ಟಲ್‌ಗಳಲ್ಲಿರುವ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳ ಫಲಿತಾಂಶ ಬಹಳ ಕೀಳುಮಟ್ಟದ್ದಾಗಿರುವುದು ಇದುವರೆಗಿನ ಅಂಕಿ ಅಂಶಗಳನ್ನು ಗಮನಿಸಿದಾಗ ಕಂಡುಬರುತ್ತದೆ. ಆ ಕಾರಣದಿಂದ ಈ ವರ್ಷದ ಆರಂಭದಿಂದಲೇ ನಾವು ಅವರಿಗೆ ಹೆಚ್ಚು ಓದಲು ತಿಳಿವು ಬರುವಂತೆ ಮತ್ತು ನಾವೆಲ್ಲಾ ವಿದ್ಯಾವಂತರಾಗಲೇಬೇಕೆಂಬ ಹಠ, ಛಲ ಅವರ ಮನಸ್ಸಲ್ಲಿ ಮೂಡುವಂತೆ ಅವರ ಮನಸ್ಸಲ್ಲಿ ಮೂಡುವಂತೆ ಅವರನ್ನು ತಿದ್ದಬೇಕು. ವ್ಯವಸ್ಥಿತವಾಗಿ ಈ ದಿಶೆಯಲ್ಲಿ ಕಾರ್ಯಕ್ರಮ ಹಾಕಿಕೊಂಡು ನಾವು ಮುಂದುವರಿದಿದ್ದೇ ಆದರೆ ಇನ್ನು 5 ವರ್ಷಗಳಲ್ಲಿ ನಮ್ಮ ಸಂಘಟನೆ ಅತ್ಯಂತ ಬಲಯುತವಾದ ಸಂಘಟನೆಯಾಗುತ್ತದೆ. ಆನಂತರ ಯಾರು ಏನೇ ತಿಪ್ಪರಲಾಗ ಹಾಕಿದರೂ ನಮ್ಮ ಸಂಘಟನೆಯನ್ನು ಕೆಡವಲು ಯಾರಿಗೂ ಸಾಧ್ಯವಾಗೊಲ್ಲ. ಆದ್ದರಿಂದ ಈ ಗಳಿಗೆಯಿಂದಲೇ ಎಲ್ಲಾ ದ. ಸಂ. ಸ. ಕಾರ್ಯಕರ್ತರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಆ ದಿಶೆಯಲ್ಲಿಯಲ್ಲಿ ಕಾರ್ಯಪ್ರವೃತ್ತರಾಗುತ್ತಾರೆಂದು ನಂಬಿರುತ್ತೇನೆ.

ಪಂಚಾಯತ್ ರಾಜ್ ವಿಧೇಯಕ : ದಲಿತರ ಆತಂಕ

(ಮೊದಲ ಪುಟದಿಂದ)


[illegible] ಸಂದರ್ಭದಲ್ಲಿ [illegible] ಅವಮಾನಗೊಳಿಸಿ ಸಾವನ್ನು ದಲಿತರ, ಹಿಂದುಳಿದವರ ಕತ್ತಿಗೆ ಗಂಟುಹಾಕಬೇಕೆಂದು ಸರ್ಕಾರಕ್ಕೆ ದಲಿತ ಚಿಂತಕರ ಸಭೆ ವಿನಂತಿಸುತ್ತದೆ. ಇದರೊಡನೆ ಮಸೂದೆಯ ಅಭ್ಯರ್ಥಿಗಳ ಅನರ್ಹತೆಯಲ್ಲಿ "ಅಸ್ಪೃಶ್ಯತೆ ಆಚರಣೆ ಮಾಡಿ ಶಿಕ್ಷೆಗೊಳಪಟ್ಟವನು" ಅನರ್ಹನಾಗದಿರುವುದು ಆತಂಕಕಾರಿಯಾಗಿದೆ.

ವಿಕೇಂದ್ರೀಕರಣವು ನಮ್ಮ ಇಂದಿನ ಜಾತೀಯ ಸಮಾಜ ವ್ಯವಸ್ಥೆಯಲ್ಲೂ 'ನಿಜವಾದ ವಿಕೇಂದ್ರೀಕರಣ'ವಾಗಲು, ದಲಿತರೂ ಅಲ್ಪಸಂಖ್ಯಾತರೂ ಹಿಂದುಳಿದವರೂ ಮಸೂದೆಯನ್ನು ಸ್ವಾಗತಿಸುವಂತಾಗಲು ದಲಿತ ಚಿಂತಕರು ಪಡುವ ಆಶಯ, ಬದಲಾವಣೆಗಳನ್ನು ಸರ್ಕಾರವು ಪರಿಶೀಲಿಸಬೇಕೆಂದು ವಿನಂತಿಸುತ್ತೇವೆ.

ಮೊದಲನೆಯದಾಗಿ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿಗಳು ಯಾವುದೇ ಕಾರ್ಯಕ್ರಮ ಕೈಗೊಂಡರೂ 'ಭಂಗಿಯಿಂದ ಬ್ರಾಹ್ಮಣನೆಡೆಗೆ' ನೀತಿಯನ್ನು ಅನಿವಾರ್ಯವಾಗಿ ಅನುಸರಿಸುವ ನೀತಿ ಸಂಹಿತೆಯನ್ನು ಉಳ್ಳದ್ದಾಗಿರಬೇಕು. ಉದಾಹರಣೆಗೆ ವಯಸ್ಕರ ಶಿಕ್ಷಣ ನಡೆಸುವುದಾಗಲಿ [illegible]ನಲ್ಲಿ ಹಾಕಿಸುವುದಾಗಲಿ ಅಥವಾ ರಸ್ತೆ [illegible] ಕಾರ್ಯವಾಗಲಿ ಆ ಮಂಡಲದಲ್ಲಿರುವ ಜಾತೀಯ ಶ್ರೇಣಿಯಲ್ಲಿ [illegible] ಅನುಷ್ಠಾನಕ್ಕೆ ತಂದ ಮೇಲೆಯೇ ಜಾತಿಯ ಶ್ರೇಣಿ ಅನುಕ್ರಮದಲ್ಲಿ ಅನುಷ್ಠಾನವಾಗುತ್ತಾ ಮೇಲಕ್ಕೆ ಹೋಗುವಂತಹದು ಕಡ್ಡಾಯವಾಗಿರಬೇಕು. ಇದರಲ್ಲೂ ಅನುಕೂಲಗಳು ಭೂಹೀನರಿಗೆ ಆಸ್ತಿರಹಿತರಿಗೆ ಸಿಗುವಂತಹ ಎಚ್ಚರಿಕೆ ಬೇಕು. ಈ ಕ್ರಮ ತಪ್ಪಿದಲ್ಲಿ ಇಂಥ ಯಾವುದೇ ಯೋಜನೆಯನ್ನು ತಡೆಯುವ ಹಕ್ಕು ದಲಿತರು ಅಲ್ಪಸಂಖ್ಯಾತರು ಹಿಂದುಳಿದ ಸದಸ್ಯರಿಗೆ ಇರಬೇಕು.

ಇಂಥ ಅನೇಕ ಬದಲಾವಣೆಗಳನ್ನು ಸೂಚಿಸಿ ಮಸೂದೆಯನ್ನು ತಿದ್ದುಪಡಿ ಮಾಡುವಂತೆ ಒತ್ತಾಯಿಸಿರುವ ದಲಿತ ಚಿಂತಕರ ಸಭೆಯು ಈ ಬಗ್ಗೆ ಕರ್ನಾಟಕಾದ್ಯಂತ ಪ್ರಚಾರ ಕಾರ್ಯ ಕೈಗೊಳ್ಳಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಪ್ರಗತಿಪರ ಸಂಘ ಸಂಸ್ಥೆಗಳಿಗೆ ಕರೆ ನೀಡಿದೆ.

ಓದಿರಿ ಓದಿಸಿ



ಸಂಪಾದಕ, ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರ್ಸ್ 2514, ಕೆ. ಜಿ. ಕೋ[illegible] ದೂರವಾಣಿ-261[illegible]